# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮೇ 08, 2021

ಸಂಪುಟ : 47 ಸಂಚಿಕೆ : 355 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ರೆಮ್‌ಡಿಸಿವಿರ್ ಪೂರೈಕೆ 2.62 ಲಕ್ಷಕ್ಕೆ ಹೆಚ್ಚಳ

ಬೆಂಗಳೂರು, ಮೇ 7 – ಕರ್ನಾಟಕಕ್ಕೆ ಮೇ 10ರಿಂದ 16ರ ನಡುವೆ ಪೂರೈಸಲಾಗುವ ರೆಮ್‌ಡಿಸಿವಿರ್ ಔಷಧಿಯ ಪ್ರಮಾಣವನ್ನು 2,62,346 ಬಾಟಲಿಗಳಿಗೆ ಹೆಚ್ಚಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಆರೋಗ್ಯ ಸಚಿವ ಕೆ. ಸುಧಾಕರ್, ರೆಮ್‌ಡಿಸಿವಿರ್ ಪೂರೈಕೆ ಹೆಚ್ಚಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

## ಸಿ.ಟಿ. ಸ್ಕ್ಯಾನ್‌ಗೆ 1,500 ರೂ. ನಿಗದಿ

ಬೆಂಗಳೂರು, ಮೇ 7 - ಖಾಸಗಿ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನಿಂಗ್ ದರವನ್ನು ನಿಗದಿಗೊಳಿಸಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಸುಧಾಕರ್ ಆದೇಶಿಸಿದ್ದಾರೆ.

ಕೆಲ ಆಸ್ಪತ್ರೆಗಳಲ್ಲಿ ರೋಗಿಗಳಿಂದ ಹೆಚ್ಚಿನ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಈ ಮಹತ್ವದ ಆದೇಶ ಹೊರಡಿಸಲಾಗಿದೆ.

ಇನ್ನು ಮುಂದೆ ಖಾಸಗಿ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನಿಂಗ್‌ಗಾಗಿ ಒಂದೂವರೆ ಸಾವಿರ ರೂಪಾಯಿ ನಿಗದಿ ಪಡಿಸಲಾಗಿದೆ. ಒಂದು ವೇಳೆ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಹಣ ಪಡೆದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದೂ ಸಚಿವರು (3ನೇ ಪುಟಕ್ಕೆ)

# ಮೇ 10ರಿಂದ ಸಂಪೂರ್ಣ ಲಾಕ್‌ಡೌನ್

## ಸೋಮವಾರದಿಂದ ಜನ ಸಂಚಾರ ಸ್ತಬ್ಧ, ಅಗತ್ಯ ವಸ್ತುಗಳ ಖರೀದಿಗೂ ವಾಹನ ಬಳಕೆ ನಿಷೇಧ



ಬೆಂಗಳೂರು, ಮೇ 7 – ಕೊರೊನಾ ಬಗ್ಗು ಬಡಿಯಲು ಮೇ 10ರಿಂದ ಬಿಗಿ ಲಾಕ್‌ಡೌನ್ ವಿಧಿಸಿರುವ ರಾಜ್ಯ ಸರ್ಕಾರ, ಜನ ಸಂಚಾರದ ಮೇಲೆ ಗರಿಷ್ಠ ನಿರ್ಬಂಧ ಹೇರಿದೆ. ಅಗತ್ಯ ವಸ್ತುಗಳ ಖರೀದಿಗೂ ಜನ ವಾಹನ ಬಳಸದಂತೆ ನಿಷೇಧಿಸಿದೆ.

ಸಂಪುಟ ಸಭೆ ಹಾಗೂ ಅಧಿಕಾರಿಗಳ ಜೊತೆಗಿನ ಚರ್ಚೆಯ ನಂತರ ಲಾಕ್‌ಡೌನ್ ಪ್ರಕಟಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸೋಮವಾರ ಬೆಳಿಗ್ಗೆ 6ರಿಂದ ಮೇ 24ರ ಬೆಳಿಗ್ಗೆ 6ರವರೆಗೆ ರಾಜ್ಯ ಸಂಪೂರ್ಣ ಲಾಕ್‌ಡೌನ್‌ನಲ್ಲಿರಲಿದೆ. ಅಗತ್ಯವಾದರೆ ಲಾಕ್‌ಡೌನ್ ವಿಸ್ತರಣೆಯಾಗಲಿದೆ ಎಂದಿದ್ದಾರೆ.

ಅಂಗಡಿ, ಮುಂಗಟ್ಟು, ಪಬ್, ಬಾರ್, ಹೋಟೆಲ್, ಕೈಗಾರಿಕಾ ಚಟುವಟಿಕೆ ನಿರ್ಬಂಧಿಸಲಾಗಿದೆ. ಆಹಾರ, ಹಾಲು, ಹಣ್ಣು, ಮಾಂಸ, ತರಕಾರಿ ಹಾಗೂ ಇತರೆ ಅಗತ್ಯ ಸಾಮಗ್ರಿಗಳ ಸರಬರಾಜು ಹಾಗೂ ಮಾರಾಟಕ್ಕೆ ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ಅಂಗಡಿ ತೆರೆಯಲು ಅನುಮತಿ ಕೊಡಲಾಗಿದೆ ಎಂದವರು ಹೇಳಿದ್ದಾರೆ.

ಹಾಲಿನ ಬೂತ್‌ಗಳು ಹಾಗೂ ತರಕಾರಿ ತಳ್ಳುಗಾಡಿಗಳು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಕಾರ್ಯ ನಿರ್ವಹಿಸಲು ಅವಕಾಶ ಕೊಡಲಾಗಿದೆ. ಆಸ್ಪತ್ರೆ ಮತ್ತು ವೈದ್ಯಕೀಯ ಚಿಕಿತ್ಸೆಗಾಗಿ ಮಾತ್ರ ಜನ ವಾಹನದಲ್ಲಿ ಸಂಚರಿಸಬಹುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಆಸ್ಪತ್ರೆ ಮತ್ತು ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದಂತೆ ಜನ ಹಾಗೂ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುವುದು. ರೈಲು ಹಾಗೂ ವಿಮಾನಗಳ ಪ್ರಯಾಣಕ್ಕೆ ಅವಕಾಶವಿದೆ ಎಂದೂ ಅವರು ಹೇಳಿದ್ದಾರೆ.

ಕಟ್ಟಡ ನಿರ್ಮಾಣ ಹಾಗೂ ಕೈಗಾರಿಕಾ ಸ್ಥಳದಲ್ಲೇ ಕಾರ್ಮಿಕರಿದ್ದರೆ ಮಾತ್ರ ಕಾರ್ಯನಿರ್ವಹಣೆಗೆ ಅವಕಾಶವಿದೆ. ಕಟ್ಟಡ ಹಾಗೂ ಕೈಗಾರಿಕೆಗಳಿಗೆ ಕಾರ್ಮಿಕರು ತೆರಳಲು ಅವಕಾಶವಿಲ್ಲ ಎಂದವರು ತಿಳಿಸಿದ್ದಾರೆ.

ಕಾರ್ಮಿಕರು ಬೆಂಗಳೂರು ತೊರೆದು ಹಳ್ಳಿಗಳಿಗೆ ಹೋಗದಂತೆ ಇದೇ ಸಂದರ್ಭದಲ್ಲಿ ಮನವಿ ಮಾಡಿಕೊಂಡಿರುವ ಯಡಿಯೂರಪ್ಪ, ಕಟ್ಟಡ ಕಾಮಗಾರಿ ಹಾಗೂ ಕೈಗಾರಿಕೆಗಳಿಗೆ ಅನುಮತಿ ನೀಡಲಾಗಿದೆ. ಕಾರ್ಮಿಕರು ಭಯಪಡುವ ಅಗತ್ಯವಿಲ್ಲ ಎಂದಿದ್ದಾರೆ.

ಲಾಕ್‌ಡೌನ್‌ಗಾಗಿ ಪರಿಹಾರ ನೀಡುವ ಬಗ್ಗೆ ಯಾವುದೇ ನಿರ್ಧಾರವನ್ನು ಇನ್ನೂ ತೆಗೆದುಕೊಂಡಿಲ್ಲ. ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಎಂದವರು (3ನೇ ಪುಟಕ್ಕೆ)

### ಅನುಮತಿ ಇರುವುದು

- ವಿಮಾನ ಮತ್ತು ರೈಲು. ತುರ್ತು ಸಂದರ್ಭಗಳಲ್ಲಿ ಟ್ಯಾಕ್ಸಿ ಹಾಗೂ ಆಟೋ
- ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಪಾರ್ಸಲ್ ಹಾಗೂ ಹೋಂ ಡೆಲಿವರಿ
- ಕೇಂದ್ರ ಹಾಗೂ ರಾಜ್ಯಗಳ ಅಗತ್ಯ ಸೇವೆ ಕಚೇರಿಗಳು
- ಆರೋಗ್ಯ ಸೇವಾ ಸೌಲಭ್ಯಗಳು
- ಕೃಷಿ ಮತ್ತು ಪೂರಕ ಚಟುವಟಿಕೆಗಳು
- ಎಲ್ಲ ಸರಕು ಸಾಗಾಣಿಕೆಗಳ ವಾಹನಗಳು
- ಆಹಾರ ದಿನಸಿ, ಹಣ್ಣು - ತರಕಾರಿ, ಮಾಂಸದ ಅಂಗಡಿಗಳು ಬೆಳಿಗ್ಗೆ 6 ರಿಂದ 10
- ಮದ್ಯಮಾರಾಟ ಪಾರ್ಸಲ್‌ನಲ್ಲಿ ಬೆಳಿಗ್ಗೆ 6ರಿಂದ 10
- ಹಾಲಿನ ಬೂತ್, ತಳ್ಳುಗಾಡಿಗಳಲ್ಲಿ ತರಕಾರಿ ಬೆಳಿಗ್ಗೆ 6ರಿಂದ ಸಂಜೆ 6 (3ನೇ ಪುಟಕ್ಕೆ)

### ನಿಷೇಧಿಸಲಾಗಿರುವುದು

- ಬಸ್, ಮೆಟ್ರೋ ಸಂಚಾರ
- ಶಾಲಾ, ಕಾಲೇಜು, ಶಿಕ್ಷಣ/ಕೋಚಿಂಗ್ ಸಂಸ್ಥೆಗಳು
- ಸಿನೆಮಾ ಹಾಲ್, ಶಾಪಿಂಗ್ ಮಾಲ್, ಜಿಮ್, ಕ್ರೀಡಾ ಸಂಕೀರ್ಣ, ಕ್ರೀಡಾಂಗಣ, ಈಜುಕೊಳ, ಉದ್ಯಾನ, ಮನರಂಜನಾ ಪಾರ್ಕ್, ಕ್ಲಬ್, ಥಿಯೇಟರ್, ಬಾರ್, ಸಮುದಾಯ ಭವನ
- ಎಲ್ಲ ಸಾಮಾಜಿಕ, ರಾಜಕೀಯ, ಕ್ರೀಡೆ, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು
- ಎಲ್ಲ ಧಾರ್ಮಿಕ ಸ್ಥಳಗಳು ಹಾಗೂ ಪೂಜಾ ಸ್ಥಳಗಳಿಗೆ ಸಾರ್ವಜನಿಕರ ಪ್ರವೇಶವಿಲ್ಲ
- ಸಾರ್ವಜನಿಕರ ಓಡಾಟ ಕಡ್ಡಾಯ ನಿಷೇಧ (ಕೆಲವು ವಿನಾಯಿತಿ)
- ಸರ್ಕಾರಿ ಹಾಗೂ ಖಾಸಗಿ ಬಸ್ ಮತ್ತು ಇತರೆ ಪ್ರಯಾಣಿಕರ ವಾಹನಗಳ ಸಂಚಾರವಿಲ್ಲ

### ಇ-ಕಾಮರ್ಸ್‌ನಲ್ಲಿ ಎಲ್ಲವೂ ಮಾರಬಹುದು

ಆನ್‌ಲೈನ್ ಮೂಲಕ ದಿನಬಳಕೆಯ ಅಗತ್ಯ ವಸ್ತುಗಳೂ ಸೇರಿದಂತೆ ಎಲ್ಲವನ್ನೂ ಮಾರಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಈ ಬಗ್ಗೆ ವಿವರ ನೀಡಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿ ಕುಮಾರ್, ಇ-ಕಾಮರ್ಸ್ ಮೂಲಕ ಮಾರಾಟ ಮಾಡುವ ಸರಕುಗಳನ್ನು ತಡೆದು ಪರಿಶೀಲಿಸುವುದು ಕಾರ್ಯಸಾಧುವಲ್ಲ. ಹೀಗಾಗಿ ಎಲ್ಲವನ್ನೂ ಮಾರಲು ಅವಕಾಶವಿದೆ ಎಂದಿದ್ದಾರೆ.

### ಲಸಿಕೆಗೂ ಕಾಲೇ ಗತಿ

ಜನತಾ ಕರ್ಫ್ಯೂ ಸಮಯದಲ್ಲಿ ಜನರು ವಾಹನಗಳಲ್ಲಿ ತೆರಳಲು ಅವಕಾಶವಿತ್ತು. ಆದರೆ, ಲಾಕ್‌ಡೌನ್ ವೇಳೆ ವಾಹನ ಬಳಕೆಗೆ ಅವಕಾಶ ಇರುವುದಿಲ್ಲ. (3ನೇ ಪುಟಕ್ಕೆ)

## ಕರ್ನಾಟಕಕ್ಕೆ 1,200 ಮೆಟ್ರಿಕ್ ಟನ್ ಆಕ್ಸಿಜನ್ ಸೂಕ್ತ

### ಹೈಕೋರ್ಟ್ ಆದೇಶ ತಡೆಗೆ ಸುಪ್ರೀಂ ನಕಾರ

ನವದೆಹಲಿ, ಮೇ 7 – ಕರ್ನಾಟಕಕ್ಕೆ ಪ್ರತಿದಿನ 1200 ಮೆಟ್ರಿಕ್ ಟನ್ ಆಕ್ಸಿಜನ್ ಪೂರೈಸಬೇಕೆಂಬ ಕರ್ನಾಟಕ ಹೈಕೋರ್ಟ್ ಆದೇಶ ತಡೆಯಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, ರಾಜ್ಯದ ಜನತೆಯನ್ನು ಸಂಕಷ್ಟದಲ್ಲಿ ಬಿಡಲಾಗದು ಎಂದು ಹೇಳಿದೆ.

ಮೇ 5ರಂದು ಹೈಕೋರ್ಟ್ ಹೊರಡಿಸಿರುವ ಆದೇಶ ನ್ಯಾಯೋಚಿತ ಹಾಗೂ ಸೂಕ್ತ ಲೆಕ್ಕಾಚಾರದಿಂದ ಕೂಡಿದೆ ಎಂದು ಹೇಳಿರುವ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಎಂ.ಆರ್. ಷಾ ಅವರನ್ನು ಒಳಗೊಂಡಿರುವ ಪೀಠ, ಈ ಆದೇಶ ತಡೆಯಲು ನಿರಾಕರಿಸಿದೆ.

ಪ್ರತಿಯೊಂದು ಹೈಕೋರ್ಟ್ ಆಕ್ಸಿಜನ್ ಪೂರೈಕೆಗೆ ಆದೇಶ ಹೊರಡಿಸಿದರೆ ಆಕ್ಸಿಜನ್ ಪೂರೈಕೆ ಜಾಲ ಕೆಲಸ ಮಾಡದಂತಾಗುತ್ತದೆ ಎಂದು ಕೇಂದ್ರ ಸರ್ಕಾರ ಮುಂದಿಟ್ಟ ವಾದವನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಪ್ರತಿ ರಾಜ್ಯಕ್ಕೆ ಆಕ್ಸಿಜನ್ ಬೇಕು. ಆದರೆ, ಎಲ್ಲ ಹೈಕೋರ್ಟ್‌ಗಳು ಆಕ್ಸಿಜನ್ ಪೂರೈಕೆ ಬಗ್ಗೆ ಆದೇಶ ಹೊರಡಿಸಲು ಆರಂಭಿಸಿದರೆ ಅದು ದೊಡ್ಡ ಸಮಸ್ಯೆಗೆ ಕಾರಣವಾಗುತ್ತದೆ ಎಂದರು.

ಈ ವಿಷಯವನ್ನು ವಿಸ್ತೃತವಾಗಿ ಪರಿಗಣಿಸುತ್ತಿರುವುದಾಗಿ ಹೇಳಿದ ಸುಪ್ರೀಂ ಕೋರ್ಟ್, ಕರ್ನಾಟಕದ ನಾಗರಿಕರನ್ನು ಸಂಕಷ್ಟದಲ್ಲಿ ಬಿಡಲಾಗದು ಎಂದು ಹೇಳಿದೆ.

ವಾಸ್ತವಾಂಶ ಪರಿಗಣಿಸಿಯೇ ಹೈಕೋರ್ಟ್ ಆದೇಶ ಹೊರಡಿಸಿದೆ. ರಾಜ್ಯಕ್ಕೆ ಪ್ರತಿದಿನ 1,165 ಮೆಟ್ರಿಕ್ ಟನ್ ಆಕ್ಸಿಜನ್ (3ನೇ ಪುಟಕ್ಕೆ)

## ಆಸ್ಪತ್ರೆಗಳಲ್ಲಿ ಬೆಡ್‌ಗಳ ವಿವರ ನಿತ್ಯ ಪ್ರಕಟ

### ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ಹೆಲ್ಪ್‌ಡೆಸ್ಕ್ : ಸಚಿವ ಭೈರತಿ ಬಸವರಾಜ್



ದಾವಣಗೆರೆ, ಮೇ 7 - ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರ ಚಿಕಿತ್ಸೆಗಾಗಿ ಮೀಸಲಿರುವ ಬೆಡ್‌ಗಳು, ವೆಂಟಿಲೇಟರ್, ಐಸಿಯು ಹಾಗೂ ಖಾಲಿ ಇರುವ ಬೆಡ್‌ಗಳ ಸಂಖ್ಯೆ ಸೇರಿದಂತೆ ಎಲ್ಲ ವಿವರಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಎಲ್ಲ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗಾಗಿ ಹೆಲ್ಪ್‌ಡೆಸ್ಕ್ ಪ್ರಾರಂಭಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಆಸ್ಪತ್ರೆವಾರು ಬೆಡ್‌ಗಳ ಭರ್ತಿ ಹಾಗೂ ಲಭ್ಯತೆ ಕುರಿತ ವಿವರವುಳ್ಳ ಪ್ರಕಟಣೆಯನ್ನು ಜಿಲ್ಲಾಧಿಕಾರಿಗಳು ಪ್ರತಿನಿತ್ಯ ಹೊರಡಿಸಲು ಸೂಚನೆ ನೀಡಲಾಗುವುದು. ಜಿಲ್ಲೆಯಲ್ಲಿ ಆಸ್ಪತ್ರೆಗಳಿಗೆ ಆಮ್ಲಜನಕ ಹಾಗೂ ರೆಮ್‌ಡಿಸಿವಿರ್ ಔಷಧ ಸಮರ್ಪಕ ಪೂರೈಕೆ ಹಾಗೂ ಲಭ್ಯವಾಗುವಂತೆ ನೋಡಿಕೊಳ್ಳುವುದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಿದರು.

ಸೋಂಕಿತರು ಬೆಡ್ ಕೇಳಲು ಬಂದಾಗ ಅಲ್ಲಿನ ಕಾವಲುಗಾರರೇ ಬೆಡ್ ಇಲ್ಲ ಎಂದು ಆಚೆಗೆ ಅಟ್ಟುತ್ತಿದ್ದಾರೆ ಎಂಬ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಆಸ್ಪತ್ರೆಯ ಪ್ರವೇಶ ದ್ವಾರದಲ್ಲಿ ಹೆಲ್ಪ್‌ಡೆಸ್ಕ್ ಸ್ಥಾಪಿಸಬೇಕು. ಕೊರೊನಾ ಚಿಕಿತ್ಸೆ ನೀಡುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಎಸ್.ಐ.ಗಳನ್ನು ನೇಮಿಸಬೇಕು. ಮಾಹಿತಿ ನೀಡಲು ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು (3ನೇ ಪುಟಕ್ಕೆ)

## ಜಿಲ್ಲೆಗೆ ಸಾವಿರ ಕೊವ್ಯಾಕ್ಸಿನ್, ಹತ್ತು ಸಾವಿರ ಕೋವಿಶೀಲ್ಡ್ ಲಸಿಕೆ

ದಾವಣಗೆರೆ, ಮೇ 7 – ಶುಕ್ರವಾರದಂದು ಜಿಲ್ಲೆಗೆ 10 ಸಾವಿರ ಕೋವಿಶೀಲ್ಡ್ ಹಾಗೂ ಒಂದು ಸಾವಿರದಷ್ಟು ಕೋವ್ಯಾಕ್ಸಿನ್ ಲಸಿಕೆ ದಾಸ್ತಾನು ಬಂದಿದೆ.

ಈ ಲಸಿಕೆಗಳನ್ನು ಎರಡನೇ ಡೋಸ್ ಪಡೆಯುವವರಿಗೆ ಮಾತ್ರ ನೀಡಲಾಗುವುದು. ಅದರಲ್ಲೂ ಕೊವ್ಯಾಕ್ಸಿನ್ ಅನ್ನು ಮೊದಲ ಡೋಸ್ ಪಡೆದು 45 ದಿನ ಪೂರೈಸಿದವರಿಗೆ ಕೊಡಲು ಸೂಚನೆ ದೊರೆತಿದೆ ಎಂದು ಲಸಿಕೆಗಾಗಿ ಜಿಲ್ಲೆಯ ನೋಡಲ್ ಅಧಿಕಾರಿಯಾಗಿರುವ ಡಾ. ಕೆ.ಎಸ್. ಮೀನಾಕ್ಷಿ ತಿಳಿಸಿದ್ದಾರೆ.

ಕೋವ್ಯಾಕ್ಸಿನ್ ಲಸಿಕೆ ಮೊದಲ ಡೋಸ್ ಪಡೆದು 45 ದಿನ ಆಗಿರುವವರು ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಎರಡನೇ ಡೋಸ್ ಪಡೆಯಬಹುದು ಎಂದವರು ಹೇಳಿದ್ದಾರೆ.

ಕೋವಿಶೀಲ್ಡ್ ಲಸಿಕೆ ಪಡೆದು 8 ವಾರ ಪೂರೈಸಿರುವವರು ಲಸಿಕೆಯನ್ನು ನಗರ ಹಾಗೂ ಗ್ರಾಮೀಣ (2ನೇ ಪುಟಕ್ಕೆ)

## ಕೊರೊನಾ ಹತೋಟಿಗೆ ಎಲ್ಲಾ ರೀತಿಯಲ್ಲೂ ಸಜ್ಜು




### ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ಹರಿಹರ, ಮೇ 7- ಕೋವಿಡ್ ನಿಯಂತ್ರಣ ಮಾಡಲು ಜಿಲ್ಲೆಯ ಎಲ್ಲಾ ಇಲಾಖೆಯಲ್ಲಿ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ಸಿಬ್ಬಂದಿಗಳ ಕೊರತೆ ಬಂದರೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ನಗರದ ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರ್‌ನ ಕೊರೊನಾ ರೋಗಿಗಳ ಯೋಗಕ್ಷೇಮ ವಿಚಾರಿಸಿ, ವ್ಯವಸ್ಥೆಯ ಕುರಿತು ವಿಚಾರಿಸಿ, ಮಾಹಿತಿ ಪಡೆದರು. ನಂತರ ಸದರ್ನ್ ಗ್ಯಾಸ್ ಏಜೆನ್ಸಿ ಮತ್ತು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ, ನಂತರದಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ರಾಜ್ಯಾದ್ಯಂತ ಕೊರೊನಾ ರೋಗದ ಹರಡುವಿಕೆಯ ಪ್ರಮಾಣ (3ನೇ ಪುಟಕ್ಕೆ)

## ದೆಹಲಿಗೆ ಆಕ್ಸಿಜನ್ ಮುಂದುವರೆಸದಿದ್ದರೆ ಕಠಿಣ ನಿಲುವು



ನವದೆಹಲಿ, ಮೇ 7 – ಮುಂದಿನ ಆದೇಶ ಹೊರಡಿಸುವ ವರೆಗೂ ದೆಹಲಿಗೆ ಪ್ರತಿದಿನ 700 ಮೆಟ್ರಿಕ್ ಟನ್ ವೈದ್ಯಕೀಯ ಆಕ್ಸಿಜನ್ ಅನ್ನು ಪ್ರತಿದಿನ ಪೂರೈಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದು, ಈ ಆದೇಶ ಉಲ್ಲಂಘಿಸಿದರೆ ಕಠಿಣ ನಿಲುವು ತಳೆಯಬೇಕಾಗುತ್ತದೆ ಎಂದು ಹೇಳಿದೆ.

ದೆಹಲಿಗೆ ಪ್ರತಿದಿನ 700 ಮೆಟ್ರಿಕ್ ಟನ್ ಆಕ್ಸಿಜನ್ ಪೂರೈಕೆ ಮಾಡಲು ನ್ಯಾಯಾಲಯ ಈ ಹಿಂದೆ ಆದೇಶ ಹೊರಡಿಸಿತ್ತು.


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮೀಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ಲಸಿಕೆಗಾಗಿ ಮುಖ್ಯಮಂತ್ರಿ ಮನೆ ಮುಂದೆ ಕೂರೋಣ

### ಜಿಲ್ಲೆಗೆ ಪ್ರತಿನಿತ್ಯ 50 ಸಾವಿರ ಲಸಿಕೆ ಪೂರೈಸಲು ಸಂಸದ ಜಿ.ಎಂ. ಸಿದ್ದೇಶ್ವರ ಆಗ್ರಹ



ದಾವಣಗೆರೆ, ಮೇ 7 – ಜಿಲ್ಲೆಯಲ್ಲಿ 12ರಿಂದ 13 ಲಕ್ಷ ಜನರಿಗೆ ಕೊರೊನಾ ಲಸಿಕೆ ನೀಡಬೇಕಿದ್ದು, ಇದಕ್ಕಾಗಿ ಪ್ರತಿದಿನ ಕನಿಷ್ಠ 40-50 ಸಾವಿರದಷ್ಟು ಲಸಿಕೆ ಪೂರೈಕೆ ಆಗಬೇಕಿದೆ. ಇದಕ್ಕಾಗಿ ಬೇಕಾದರೆ ಮುಖ್ಯಮಂತ್ರಿ ಮನೆ ಮುಂದೆ ಕುಳಿತುಕೊಳ್ಳೋಣ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಜಿಲ್ಲಾಡಳಿತ ಭವನದಲ್ಲಿರುವ ತುಂಗಭದ್ರಾ ಸಭಾಂಗಣದಲ್ಲಿ ಕೊರೊನಾ ನಿಯಂತ್ರಣ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅಧ್ಯಕ್ಷತೆಯಲ್ಲಿ ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿದಿನ 12-20 ಸಾವಿರ ಲಸಿಕೆ ಕೊಟ್ಟರೆ ಸಮಸ್ಯೆ ಬಗೆಹರಿಯುವುದಿಲ್ಲ ಎಂದಿದ್ದಾರೆ.

ನಮ್ಮಲ್ಲಿ 45 ವರ್ಷ ಮೀರಿದ ಲಸಿಕೆ ಪಡೆಯುವವರ ಸಂಖ್ಯೆ 2.55 ಲಕ್ಷದಷ್ಟಿದೆ. 18 ವರ್ಷ ಮೀರಿದವರಿಗೆ ಲಸಿಕೆ ನೀಡುವುದಾಗಿ ಪ್ರಧಾನ ಮಂತ್ರಿ ಘೋಷಣೆ ಮಾಡಿದ್ದಾರೆ. ಈ ವರ್ಗದಲ್ಲಿ 10 ಲಕ್ಷ ಜನ ಬರುತ್ತಾರೆ. ಒಟ್ಟಾರೆ 12-13 ಲಕ್ಷ ಜನರಿಗೆ ಲಸಿಕೆ ನೀಡಬೇಕಿದೆ ಎಂದವರು ತಿಳಿಸಿದ್ದಾರೆ.

ಹೀಗಾಗಿ ಪ್ರತಿದಿನ 12-20 ಸಾವಿರ ಲಸಿಕೆ ತರಿಸಿ ಕೊಡಲು ಹೋದರೂ ಜನರು ಸರದಿಯಲ್ಲಿ ನಿಂತು ಹೊಡೆದಾಡುವ ಪರಿಸ್ಥಿತಿ ಬರುತ್ತದೆ ಎಂದವರು ಕಳವಳ ವ್ಯಕ್ತಪಡಿಸಿದ್ದಾರೆ.

ಕನಿಷ್ಠ ಪ್ರತಿದಿನ 40-50 ಸಾವಿರ ಲಸಿಕೆ ತರಿಸಲು ಏನಾದರೂ ಪ್ರಯತ್ನ ಮಾಡಬೇಕು. ನೀವು ಹೇಳಿದರೆ ನಾವೆಲ್ಲ ಜನಪ್ರತಿನಿಧಿಗಳು ಬರುತ್ತೇವೆ. ಸಿಎಂ (ಬಿ.ಎಸ್. ಯಡಿಯೂರಪ್ಪ) ಮನೆ ಮುಂದೆ ಕುಳಿತುಕೊಳ್ಳೋಣ. ಯಾವುದೇ ಕಾರಣಕ್ಕೂ ಇಲ್ಲ ಎನ್ನುವಂತಿಲ್ಲ ಎಂದು (3ನೇ ಪುಟಕ್ಕೆ)

## ಕೋರ್ಟ್‌ಗಳು ಬಂದ್, ಜೈಲಲ್ಲೂ ಜಾಗವಿಲ್ಲ

**ಸರ್ಕಾರದ ನಿರ್ಬಂಧಗಳಲ್ಲಿ ದ್ವಂದ್ವ : ಎಸ್ಪಿ**

ರಾಜ್ಯ ಸರ್ಕಾರ ಪ್ರಕಟಿಸಿರುವ ಜನತಾ ಕರ್ಫ್ಯೂ ಮಾರ್ಗಸೂಚಿಯಲ್ಲಿ ದ್ವಂದ್ವಗಳಿವೆ. ಜನಸಂಚಾರದ ಮೇಲೆ ನಿರ್ಬಂಧ ಹೇರಿದ್ದರೂ ವೈದ್ಯಕೀಯ, ಕೃಷಿ ಚಟುವಟಿಕೆ, ಕಟ್ಟಡ ನಿರ್ಮಾಣ, ಕೈಗಾರಿಕೆ, ಸಾಗಣೆ ಇತ್ಯಾದಿಗಳಿಗೆ ಅನುಮತಿ ನೀಡಲಾಗಿದೆ. ಇದರಿಂದಾಗಿ ಜನರ ಸಂಚಾರ ಹೆಚ್ಚಾಗಿದೆ ಎಂದು ಎಸ್ಪಿ ಹನುಮಂತರಾಯ ಹೇಳಿದ್ದಾರೆ.

ರೈಲಿನ ಒಂದು ವ್ಯಾಗನ್ ಬಂದರೂ ಅದಕ್ಕೆ 500ಕ್ಕೂ ಹೆಚ್ಚು ಕಾರ್ಮಿಕರು (3ನೇ ಪುಟಕ್ಕೆ)

### ಆಕ್ಸಿಜನ್ ಟ್ಯಾಂಕ್ ಖರೀದಿಗೆ ಸೂಚನೆ

ಜಿಲ್ಲಾ ಸಿ.ಜಿ. ಆಸ್ಪತ್ರೆಗೆ 13 ಕೆ.ಎಲ್. ಸಾಮರ್ಥ್ಯದ ಟ್ಯಾಂಕ್ ಖರೀದಿಸಲು ಒಂದು ಕೋಟಿ ರೂ. ವೆಚ್ಚವಾಗಲಿದೆ. ಈ ಬಗ್ಗೆ ಜಿಲ್ಲಾಧಿ ಕಾರಿ ಮಹಾಂತೇಶ್ ಬೀಳಗಿ ಕ್ರಮ ತೆಗೆದುಕೊಳ್ಳಬೇಕು. (3ನೇ ಪುಟಕ್ಕೆ)

### ಅರ್ಧ ಗ್ರಾಮ ಅಸ್ವಸ್ಥ

ತಮ್ಮ ಕ್ಷೇತ್ರದಲ್ಲಿ ಬರುವ ರಾಮೇಶ್ವರ ಗ್ರಾಮದ ಅರ್ಧದಷ್ಟು ಜನರು ಚಳಿ ಜ್ವರದಿಂದ ಬಳಲುತ್ತಿದ್ದಾರೆ. ಶುಕ್ರವಾರ ಬೆಳಿಗ್ಗೆ ಒಬ್ಬರು ಮೃತಪಟ್ಟಿದ್ದು, ಟೆಸ್ಟ್ ಮಾಡಿಸಿದಾಗ ಕೊರೊನಾ ಪಾಸಿಟಿವ್ ಬಂದಿದೆ ಎಂದು ಮುಖ್ಯಮಂತ್ರಿಗಳ (3ನೇ ಪುಟಕ್ಕೆ)

## ಕೊರೊನಾ ತಡೆಗಟ್ಟಲು ಲಾಕ್‌ಡೌನ್ ಪರಿಹಾರವಲ್ಲ





ದಾವಣಗೆರೆ, ಮೇ 7- ಕೊರೊನಾದ 2ನೇ ಅಲೆ ತೀವ್ರವಾಗಿದ್ದು, ಇದನ್ನು ತಡೆಗಟ್ಟಲು ಲಾಕ್‌ಡೌನ್ ಮತ್ತು ಕರ್ಫ್ಯೂ ಒಂದೇ ಪರಿಹಾರವಲ್ಲ. ಸರ್ಕಾರ ಮತ್ತು ಜಿಲ್ಲಾಡಳಿತ ರೋಗಿಗಳಿಗೆ ಸೂಕ್ತ ವ್ಯವಸ್ಥೆ ಮಾಡಿ, ಅವಶ್ಯ ಇರುವವರಿಗೆ ಉಚಿತವಾಗಿ ವ್ಯಾಕ್ಸಿನ್, ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ನೀಡಬೇಕೆಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಒತ್ತಾಯಿಸಿದ್ದಾರೆ.

ನವೆಂಬರ್‌ನಲ್ಲಿ ಕೊರೊನಾ 2ನೇ ಅಲೆ ಆರಂಭಗೊಳ್ಳುವ ಬಗ್ಗೆ ಸರ್ಕಾರದ ಗಮನಕ್ಕೆ ಇದ್ದರೂ ಸಹ ಸರ್ಕಾರ 2ನೇ ಅಲೆ ತಡೆಗಟ್ಟುವ ನಿಟ್ಟಿನಲ್ಲಿ ಜವಾಬ್ದಾರಿಯುತ ಕೆಲಸ ಮಾಡದೇ ತೀವ್ರವಾಗಿ ನಿರ್ಲಕ್ಷಿಸಿದ್ದರಿಂದ ಇಂದು ಸಮಸ್ಯೆ ಎದುರಿಸುವಂತಾಗಿದೆ ಎಂದು ದೂರಿದರು.

ಕೊರೊನಾ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಸರ್ಕಾರ ಜನರನ್ನು ತಪ್ಪಿತಸ್ಥರು ಎಂದು ಬಿಂಬಿಸದೇ ತಮ್ಮ (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 538 ಸೋಂಕಿತರು ಪತ್ತೆ

ದಾವಣಗೆರೆ, ಮೇ 7 – ಶುಕ್ರವಾರದಂದು ಜಿಲ್ಲೆಯ 538 ಜನರಲ್ಲಿ ಕೊರೊನಾ ಸೋಂಕಿರುವುದು ಕಂಡು ಬಂದಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ.

ಇದೇ ದಿನ 258 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಪ್ರಸಕ್ತ ಸಕ್ರಿಯ ಸೋಂಕಿತರ ಸಂಖ್ಯೆ 3,208 ಆಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 351, ಹರಿಹರದಲ್ಲಿ 48, ಜಗಳೂರಿನಲ್ಲಿ 30, ಚನ್ನಗಿರಿಯಲ್ಲಿ 44, ಹೊನ್ನಾಳಿಯಲ್ಲಿ 42 ಹಾಗೂ ಹೊರ ಜಿಲ್ಲೆಗಳ 23 ಸೋಂಕಿತರು ಪತ್ತೆಯಾಗಿದ್ದಾರೆ. ಕೊರೊನಾದಿಂದ ನಗರದ ಶಿವಕುಮಾರಸ್ವಾಮಿ ಬಡಾವಣೆಯ 30 ವರ್ಷದ ಪುರುಷ ಹಾಗೂ ಕಾಳಿಕಾದೇವಿ ರಸ್ತೆಯ 63 ವರ್ಷದ ಪುರುಷ ಸಾವನ್ನಪ್ಪಿದ್ದಾರೆ.

# ಹಳ್ಳಿಗಳಲ್ಲೂ ಹರಡುತ್ತಿರುವ 2ನೇ ಅಲೆ : ಆತಂಕ

ಮಲೇಬೆನ್ನೂರು, ಮೇ 7- ಮಹಾಮಾರಿ ಕೊರೊನಾ 2ನೇ ಅಲೆ ಗ್ರಾಮೀಣ ಪ್ರದೇಶಕ್ಕೂ ಹರಡುತ್ತಿದ್ದು, ದಿನೇ ದಿನೇ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದು ಜನರಲ್ಲಿ ಆತಂಕ ಮೂಡಿಸಿದೆ. ಏಪ್ರಿಲ್ 20 ರಿಂದ ಮೇ 7 ರವರೆಗೆ ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಮಲೇಬೆನ್ನೂರು ಪಟ್ಟಣ ಸೇರಿದಂತೆ ಹೋಬಳಿಯಲ್ಲಿ 80 ಜನರಿಗೆ ಕೊರೊನಾ ಸೋಂಕು ತಗುಲಿದೆ.

ಅಲ್ಲದೇ, ಕೊರೊನಾ ಸೋಂಕಿನಿಂದಾಗಿ ಮಲೇಬೆನ್ನೂರು, ಆದಾಪುರ, ಜಿಗಳಿ, ಯಲವಟ್ಟಿ, ಭಾನುವಳ್ಳಿ ಗ್ರಾಮಗಳಲ್ಲಿ ತಲಾ ಒಬ್ಬರು ಮತ್ತು ಹೊಳೆಸಿರಿಗೆರೆ, ಹನಗವಾಡಿಯಲ್ಲಿ ತಲಾ ಇಬ್ಬರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಈ ಎಲ್ಲಾ ಆತಂಕಗಳ ನಡುವೆ ಶುಕ್ರವಾರ ಹರಿಹರ ತಾಲ್ಲೂಕಿನಲ್ಲಿ 25 ಜನರಿಗೆ ಮಾತ್ರ ಸೋಂಕು ದೃಢಪಟ್ಟಿದೆ. ಕಳೆದ 15 ದಿನಗಳಲ್ಲಿ ಮಂಗಳವಾರ (ಮೇ 4) ಅತಿ ಹೆಚ್ಚು ಎಂದರೆ 107 ಕೊರೊನಾ ಕೇಸುಗಳು ಪತ್ತೆಯಾಗಿದ್ದವು. ಬುಧವಾರ (ಮೇ 5) 77 ಜನರಿಗೆ ಮತ್ತು ಗುರುವಾರ 46 ಜನರಿಗೆ ಪಾಸಿಟಿವ್ ಬಂದಿದೆ.

ಮಲೇಬೆನ್ನೂರಿನಲ್ಲಿ ಗುರುವಾರ ಒಂದೂ ಪಾಸಿಟಿವ್ ಕೇಸ್ ಬಂದಿರಲಿಲ್ಲ. ಶುಕ್ರವಾರ ಇಬ್ಬರು ಸೇರಿ ಇದುವರೆಗೆ ಒಟ್ಟು 13 ಜನರಿಗೆ ಸೋಂಕು ದೃಢಪಟ್ಟಿದೆ. ಸೋಂಕಿನಿಂದ ಒಬ್ಬರು ಮಾತ್ರ ಮೃತಪಟ್ಟಿದ್ದಾರೆ.

**ಹಳ್ಳಿಗಳಲ್ಲಿ ಸೋಂಕಿತರು :** ಜಿಗಳಿ -2, ಹಾಲಿವಾಣ -3, ಕೊಮಾರನಹಳ್ಳಿ -3, ಕುಂಬಳೂರು -7, ಕೊಕ್ಕನೂರು -4, ನಿಟ್ಟೂರು -6, ಯಲವಟ್ಟಿ -4, ಉಕ್ಕಡಗಾತ್ರಿ -4, ವಾಸನ -1, ಬೂದಿಹಾಳ್ -2, ಗುಳದಹಳ್ಳಿ -2, ಮಲ್ಲನಾಯ್ಕನಹಳ್ಳಿ -2, ಹೊಳೆಸಿರಿಗೆರೆ -11, ಜಿ.ಟಿ.ಕಟ್ಟೆ-2, ಬಿಳಸನೂರು -5, ಹಳ್ಳಿಹಾಳ್-2, ಹರಳಹಳ್ಳಿ -1, ಕುಣೆಬೆಳಕೆರೆ -2, ಹೊಸಹಳ್ಳಿಯಲ್ಲಿ ಒಬ್ಬರಿಗೆ ಸೋಂಕು ತಗುಲಿರುವ ಬಗ್ಗೆ ಉಪತಹಶೀಲ್ದಾರ್ ಆರ್. ರವಿ ಮಾಹಿತಿ ನೀಡಿದರು.

**ಲಸಿಕೆಗೆ ಹೆಚ್ಚಿದ ಬೇಡಿಕೆ :** ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು, ಸಾವು - ನೋವು ಹೆಚ್ಚಾಗುತ್ತಿರುವುದರಿಂದ 45 ವರ್ಷ ಮೇಲ್ಪಟ್ಟವರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಪರದಾಡುತ್ತಿದ್ದಾರೆ. ಲಸಿಕೆ ಬಂದ ಆರಂಭದಲ್ಲಿ ಲಸಿಕೆ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದವರೇ ಇಂದು ಲಸಿಕೆ ಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.

ಏಪ್ರಿಲ್ ತಿಂಗಳಲ್ಲಿ ಆರೋಗ್ಯ ಇಲಾಖೆಯವರು ಹಳ್ಳಿಗಳಿಗೆ ಹೋಗಿ ಲಸಿಕೆ ಹಾಕುತ್ತೇವೆ ಬನ್ನಿ ಎಂದರೆ ಬಾರದವರು, ಇಂದು ಲಸಿಕೆಗಾಗಿ ಸರ್ಕಾರಿ ಆಸ್ಪತ್ರೆಗಳ ಮುಂದೆ ಕ್ಯೂ ನಿಲ್ಲುತ್ತಿದ್ದಾರೆ ಎಂದು ಹಿರಿಯ ವೈದ್ಯರೊಬ್ಬರು ಬೇಸರ ವ್ಯಕ್ತಪಡಿಸಿದರು.

**ಹಳ್ಳಿಗಳಲ್ಲಿ ಜಾಗೃತಿ :** ಕಳೆದ ವರ್ಷ ಕೊರೊನಾ ಕಾಲಿಟ್ಟ ಸಂದರ್ಭದಲ್ಲಿ ಗ್ರಾ.ಪಂ ಹಾಗೂ ಹಳ್ಳಿಗಳ ಮಟ್ಟದಲ್ಲಿ ರಚನೆಯಾಗಿದ್ದ ರೀತಿಯಲ್ಲೇ ಈ ವರ್ಷವೂ ಗ್ರಾ.ಪಂ.ಗಳಲ್ಲಿ ಹೊಸ ಅಧ್ಯಕ್ಷರ-ಉಪಾಧ್ಯಕ್ಷ ಹಾಗೂ ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತರು, ಪಿಡಿಓ, ಗ್ರಾಮ ಲೆಕ್ಕಾಧಿಕಾರಿ, ಶಿಕ್ಷಕರನ್ನು ಒಳಗೊಂಡ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡಲಾಗಿದೆ. ಎಲ್ಲಾ ಹಳ್ಳಿಗಳಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಕೊರೊನಾ 2ನೇ ಅಲೆ ನಿಯಂತ್ರಿಸಲು ಉತ್ತಮವಾಗಿ ಕೆಲಸ ಮಾಡುತ್ತಿರುವುದು ಕಂಡು ಬಂದಿದೆ. ನಗರಗಳಿಂದ ಹಳ್ಳಿಗೆ ಬಂದ ವರ ಮಾಹಿತಿ, ಅವರ ಆರೋಗ್ಯ ತಪಾಸಣೆ, ಹೋಂ ಕ್ವಾರಂಟೈನ್ ಮಾಡಿಸುವುದು ಮತ್ತು ಜನರಲ್ಲಿ ಕೊರೊನಾ ಬಗ್ಗೆ ಅರಿವು ಮೂಡಿಸುವುದು ಹಾಗೂ ಸ್ವಚ್ಛತೆ, ಫಾಗಿಂಗ್ ಮಾಡಿಸುವಂತಹ ಕೆಲಸಗಳು ನಡೆದಿವೆ.



ಮಲೇಬೆನ್ನೂರು ಹೋಬಳಿಯಲ್ಲಿ 80 ಜನರಿಗೆ ಸೋಂಕು, 6 ಸಾವು

### ನಿರ್ಲಕ್ಷ್ಯವೇ ಸಾವಿಗೆ ಕಾರಣ

ಬೆಂಗಳೂರಿನ ಜಯದೇವ ಆಸ್ಪತ್ರೆಯ ಮುಖ್ಯಸ್ಥ ಡಾ.ಮಂಜುನಾಥ್ ಅವರ ಪ್ರಕಾರ 'ಯುವಕರ ನಿರ್ಲಕ್ಷ್ಯವೇ ಸೋಂಕಿಗೆ ತುತ್ತಾಗುತ್ತಿರುವುದಕ್ಕೆ ಮೊದಲ ಕಾರಣವಾಗಿದೆ. ನಮಗೆ ಏನೂ ಆಗುವುದಿಲ್ಲ ಎನ್ನುವ ಮನೋಭಾವ ಯುವಕರನ್ನು ಹೆಚ್ಚು ಹೆಚ್ಚು ಸೋಂಕಿಗೆ ತುತ್ತಾಗಿಸುತ್ತಿದೆ. ಯುವಕರು ಗುಂಪು ಸೇರುವುದು ಕೂಡ ಹೆಚ್ಚು. ಆದ್ದರಿಂದ ಅವರಲ್ಲಿ ಸೋಂಕು ಬೇಗನೆ ಹರಡುತ್ತಿದೆ. ರೋಗ-ನಿರೋಧಕ ಶಕ್ತಿ ಚೆನ್ನಾಗಿದ್ದವರು ಬದುಕುತ್ತಾರೆ. ಕೆಲವರಿಗೆ ಸೋಂಕು ಬಂದಿರುವುದೇ ಗೊತ್ತಾಗುವುದಿಲ್ಲ. ರೋಗ - ನಿರೋಧಕ ಶಕ್ತಿ ಕಡಿಮೆ ಇದ್ದವರು ಸಾವಿಗೆ ತುತ್ತಾಗುತ್ತಾರೆ ಎಂದು ಡಾ. ಮಂಜುನಾಥ್ ಹೇಳಿದ್ದಾರೆ.

# ನ್ಯಾಮತಿ ತಾಲ್ಲೂಕಿನ ರಾಮೇಶ್ವರದಲ್ಲಿ 26 ಜನರಿಗೆ ಕೊರೊನಾ ಸೋಂಕು ಪತ್ತೆ



ನ್ಯಾಮತಿ, ಮೇ 7- ತಾಲ್ಲೂಕಿನ ರಾಮೇಶ್ವರ ಗ್ರಾಮದಲ್ಲಿ ಕೆಮ್ಮು, ಶೀತ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಗ್ರಾಮದಲ್ಲಿ ಮೊಕ್ಕಾಂ ಹೂಡಿ ಗ್ರಾಮಸ್ಥರಿಗೆ ಕೊರೊನಾ ಪರೀಕ್ಷೆ ಮಾಡಿಸಿದ್ದು 26 ಜನರಿಗೆ ಕೊರೊನಾ ಸೋಂಕು ಇಂದು ಪತ್ತೆಯಾಗಿದೆ.

ಗುರುವಾರ ಸಂಜೆ ಗ್ರಾಮದಲ್ಲಿ ಕೆಮ್ಮು, ನೆಗಡಿ ಹೆಚ್ಚಾಗಿದೆ ಎಂಬ ವಿಚಾರ ತಿಳಿಯುತ್ತಿದ್ದಂತೆ ಗ್ರಾಮಕ್ಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದ್ದ ಶಾಸಕರು, ಅಧಿಕಾರಿಗಳಿಗೆ ಗ್ರಾಮದ ಪ್ರತಿಯೊಬ್ಬರಿಗೂ ಕೊರೊನಾ ಪರೀಕ್ಷೆ ಮಾಡಿಸುವಂತೆ ಸೂಚನೆ ನೀಡಿ ಬಂದಿದ್ದರು. ಶುಕ್ರವಾರ ಬೆಳಗ್ಗೆಯಿಂದ ಅಧಿಕಾರಿಗಳ ತಂಡ ಗ್ರಾಮದಲ್ಲಿ ಬೀಡು ಬಿಟ್ಟಿದ್ದು 248 ಜನರಿಗೆ ಕೋವಿಡ್ ಪರೀಕ್ಷೆ ಮಾಡಿಸಿದ್ದು ಅದರಲ್ಲಿ 26 ಜನರಿಗೆ ಕೊರೊನಾ ಪಾಸಿಟಿವ್ ಪತ್ತೆಯಾಗಿದೆ.

ಕೊರೊನಾ ಸೋಂಕಿತರಲ್ಲಿ ಕೆಲವರನ್ನು ಹೊನ್ನಾಳಿ ತಾಲ್ಲೂಕು ಆಸ್ಪತ್ರೆಗೆ ದಾಖಲು ಮಾಡಿದ್ದು, ಮತ್ತೆ ಕೆಲವರನ್ನು ಮಾದನಬಾವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ದಾಖಲು ಮಾಡಿದ್ದು ಇನ್ನು ಕೆಲವರನ್ನು ಹೋಂ ಐಸೋಲೇಷನ್ ಮಾಡಲಾಗಿದೆ.

ಗ್ರಾಮದ ಪ್ರತಿಯೊಂದು ಮನೆಗಳಿಗೂ ಭೇಟಿ ನೀಡಿದ ಶಾಸಕರು, ಪ್ರತಿಯೊಬ್ಬರೂ ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದರು. ಅಲ್ಲದೇ ಅಧಿಕಾರಿಗಳು ಗ್ರಾಮದಲ್ಲೇ ಬೀಡು ಬಿಟ್ಟು ಇನ್ನೂ ಎರಡು ದಿನ ಗ್ರಾಮದಲ್ಲಿನ ಪ್ರತಿಯೊಬ್ಬರಿಗೂ ಕೋವಿಡ್ ಪರೀಕ್ಷೆ ಮಾಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಗ್ರಾಮದಲ್ಲಿ ಇನ್ನೂ 1,400 ಜನರ ಕೋವಿಡ್ ಪರೀಕ್ಷೆ ಮಾಡಿಸಿದ್ದು ಅವರ ವರದಿ ಬರುವುದು ಬಾಕಿ ಇದ್ದು, ಸೋಂಕಿನ ಪ್ರಮಾಣ ಹೆಚ್ಚಾಗಬಹುದೆಂದು ಅವರು ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ತನುಜಾ ಟಿ. ಸವದತ್ತಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮದ ಮುಖಂಡರು ಹಾಜರಿದ್ದರು.

## ಹತ್ತು ಸಾವಿರ ಕೋವಿಶೀಲ್ಡ್ ಲಸಿಕೆ

**(1ನೇ ಪುಟದಿಂದ)** ಆರೋಗ್ಯ ಕೇಂದ್ರದಲ್ಲಿ ಪಡೆಯಬಹುದು ಎಂದು ಡಾ. ಮೀನಾಕ್ಷಿ ತಿಳಿಸಿದ್ದಾರೆ.

ಕೋವಿಶೀಲ್ಡ್ ಲಸಿಕೆ ತಕ್ಕ ಮಟ್ಟಿಗೆ ಪೂರೈಕೆಯಾಗುತ್ತಿದ್ದರೂ, ಕೊವ್ಯಾಕ್ಸಿನ್ ಲಸಿಕೆ ಬರದೇ ಮೊದಲ ಡೋಸ್ ಪಡೆದವರು ಕಳವಳಕ್ಕೀಡಾಗಿದ್ದರು. ಅವರಿಗೆ ಕೊವ್ಯಾಕ್ಸಿನ್ ಲಸಿಕೆ ಪೂರೈಸಿರುವುದು ಅನುಕೂಲವಾಗಲಿದೆ.

# ಹರಿಹರ ಕೋವಿಡ್ ಸೆಂಟರ್‌ಗೆ ಉಸ್ತುವಾರಿ ಸಚಿವರ ಭೇಟಿ

ಹರಿಹರ, ಮೇ 7- ನಗರದ ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರ್, ಸದರನ್ ಗ್ಯಾಸ್ ಏಜೆನ್ಸಿ, ಸಾರ್ವಜನಿಕ ಆಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಎಸಿ ಮಮತಾ ಹೊಸಗೌಡ್ರು ಅವರುಗಳು ಭೇಟಿ ನೀಡಿ, ಇಲ್ಲಿನ ವ್ಯವಸ್ಥೆಯ ಬಗ್ಗೆ ಮಾಹಿತಿ ಸಂಗ್ರಹಿಸಿದರು.



ಈ ಸಂದರ್ಭದಲ್ಲಿ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ, ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ನಾಗರಾಜ್, ನಟರಾಜ್, ರಾಘವನ್, ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಡಾ. ವಿಶ್ವನಾಥ, ಡಾ. ಸವಿತಾ, ಡಾ. ಹನುಮನಾಯ್ಕ್, ಪಿಎಸ್‌ಐಗಳಾದ ಸುನಿಲ್ ಬಸವರಾಜ್, ಡಿ. ರವಿಕುಮಾರ್, ನಗರಸಭೆ ಎಇಇ ಬಿರಾದಾರ್, ಪಿಡಿಓ ವಿಜಯಲಕ್ಷ್ಮಿ ಇನ್ನಿತರರು ಹಾಜರಿದ್ದರು.

## ಸೋಂಕಿತರಿಗೆ ಉಚಿತ ವಾಹನ ಸೌಲಭ್ಯ

ಹೊನ್ನಾಳಿ, ಮೇ 7- ಜನತೆ ಇತ್ತೀಚಿಗೆ ಎದುರಿಸುತ್ತಿರುವ ಕೋವಿಡ್ ಸಮಸ್ಯೆ ಮನಗಂಡ ಧರ್ಮಸ್ಥಳ ಶ್ರೀಕ್ಷೇತ್ರವು ಬಡ ಕೋವಿಡ್ ಸೋಂಕಿತರು ಹಾಗೂ ಕೋವಿಡ್ ಶಂಕಿತರು ಆಸ್ಪತ್ರೆಗೆ ಉಚಿತವಾಗಿ ಹೋಗಿ ಬರಲು ಅನುಕೂಲವಾಗುವಂತೆ ಎರಡು ವಾಹನಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ಬಸವರಾಜ್ ಅಂಗಡಿ ತಿಳಿಸಿದ್ದಾರೆ.

ತಿಮ್ಲಾಪುರದಿಂದ ಕೋವಿಡ್ ಶಂಕಿತ ವ್ಯಕ್ತಿಯನ್ನು ಬುಧವಾರದಂದು ಹೊನ್ನಾಳಿ ಆಸ್ಪತ್ರೆಗೆ ತಪಾಸಣೆಗೆ ಬಂದು ಬಿಡಲಾಗಿದೆ ಎಂದರು.

ಬಡಜನತೆಯು ವಾಹನದ ಸೌಲಭ್ಯಕ್ಕಾಗಿ ಮೊ.ನಂ. 70901 29365 ಕ್ಕೆ ಸಂಪರ್ಕಿಸಬಹುದಾಗಿದೆ ಎಂದರು. ಡಾ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಎರಡು ವಾಹನಗಳನ್ನು ಪಡೆದು ಮಂಗಳವಾರದಿಂದ ಈ ಸೌಲಭ್ಯ ಕಲ್ಪಿಸಲಾಗಿದೆ.

## ರಾಜ್ಯಮಟ್ಟದ ಕರಾಟೆಯಲ್ಲಿ ಪ್ರಶಸ್ತಿ



ದಾವಣಗೆರೆ, ಮೇ 7- ಈಚೆಗೆ ನಗರದಲ್ಲಿ ನಡೆದ ರಾಜ್ಯಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ನಗರದ ಡ್ರಾಗನ್ ವಾರಿಯರ್ಸ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್‌ನ ಮಕ್ಕಳು ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ. ಮದನ್, ಗಗನ್, ಚಂದು, ಯುಕ್ತ, ಅಮೃತ, ಸಂಜನ್, ಸುಕೃತ ಇದರಲ್ಲಿ ಆರು ಪ್ರಥಮ ಮತ್ತೊಂದು ದ್ವಿತೀಯ ಸ್ಥಾನ ಪಡೆದಿದ್ದು, ಈ ಎಲ್ಲಾ ವಿಜೇತ ಮಕ್ಕಳಿಗೆ ತಾವು ತರಬೇತಿ ನೀಡಿದ್ದಾಗಿ ಅಸೋಸಿಯೇಷನ್‌ನ ಎ. ಸಾಧಿಕ್ ಭಾಷಾ ತಿಳಿಸಿದ್ದಾರೆ.

## ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ನಗರದ ಕರಾಟೆ ಪಟುಗಳಿಗೆ ಬಹುಮಾನ



ದಾವಣಗೆರೆ, ಮೇ 7- ನಗರದಲ್ಲಿ ಈಚೆಗೆ ನಡೆದ ರಾಜ್ಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ದಾವಣಗೆರೆ ಕರಾಟೆ ಪಟುಗಳಾದ ಟಿ. ದರ್ಶನ್, ಕೆ.ಎಂ. ಗಣೇಶ್, ಕೆ.ಎಂ. ಶಶಿಧರ್, ಎನ್. ರಾಘವಿ, ವಿ. ಸಾನವಿ, ಆರ್. ಸ್ಫೂರ್ತಿ, ಕೆ. ತನ್ಮಯ, ವಿ. ನಮ್ರತಾ ಮೊದಲನೇ ಸ್ಥಾನ ಹಾಗೂ ಎನ್. ರಾಕೇಶ್, ಹೆಚ್.ಆರ್. ಕ್ರಾಂತಿ ದ್ವಿತೀಯ ಸ್ಥಾನ, ವಂಶಿ ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಸನ್‌ಶೈನ್ ನಜೀರ್ ತಿಳಿಸಿದ್ದಾರೆ.

## ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿ ರಿಯಾಯ್ತಿ : ಜೂನ್ 30 ರವರೆಗೆ ವಿಸ್ತರಣೆ

ಜಗಳೂರು

ಜಗಳೂರು, ಮೇ 7- ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲೀಕರಿಗೆ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಶೇ. 5 ರ ರಿಯಾಯಿತಿಯಲ್ಲಿ ಪಾವತಿಸಲು ಏಪ್ರಿಲ್ ಅಂತ್ಯದವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ, ಕೋವಿಡ್ ಹಿನ್ನೆಲೆಯಲ್ಲಿ ಆಸ್ತಿ ತೆರಿಗೆ ಮೇಲಿನ ಶೇ. 5 ರಿಯಾಯ್ತಿಯನ್ನು ಸರ್ಕಾರದ ಆದೇಶದಂತೆ ಜೂನ್ 30 ರವರೆಗೆ ವಿಸ್ತರಿಸಲಾಗಿರುತ್ತದೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್ ತಿಳಿಸಿದ್ದಾರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಜ್ ಕಲ್ಲುಗಳು ಬೇಕಾಗಿವೆ**
ಮನೆ ಕಟ್ಟಲು
ಸೈಜ್ ಕಲ್ಲುಗಳು ಬೇಕಾಗಿವೆ.
ಕೂಡಲೇ ಸಂಪರ್ಕಿಸಿ :
ಮೊ. 99800-20207

**ಮನೆಗಳು ಮಾರಾಟಕ್ಕಿವೆ**
40x60 North, 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ, ಹೈಟೆಕ್‌ನಲ್ಲಿ 30x50 West, 30x40 West, ಹೊಸ ಮನೆಗಳು ಇವೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಡಾ. ಟಿ.ಜಿ. ನಿರಂಜನ್
ನಂದಿ ಎಕ್ಸ್‌ರೇ ಹಾಸ್ಪಿಟಲ್, ದಾವಣಗೆರೆ.
ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್‌ಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x58 ಪೂರ್ವ, 30x50 ಉತ್ತರ, ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x36 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x56 ಉತ್ತರ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಹೊಲದಲ್ಲಿ ಕೆಲಸ ಮಾಡಲು ಹಾಗೂ ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ. ಸಂಪರ್ಕಿಸಿ:
70185 88900
95388 70257

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಗ್ಲಾಸ್ ಹೌಸ್ ಹತ್ತಿರ, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಪಶ್ಚಿಮ: 30x50, ದಕ್ಷಿಣಕ್ಕೆ : 40x40 ಅಳತೆಯುಳ್ಳ ಸೈಟುಗಳು ಮಾರಾಟಕ್ಕಿವೆ.
90198 88512, 96111 50888

**NH4 ರಸ್ತೆಗೆ ಜಮೀನು ಕೊಳ್ಳಲು ಬೇಕಾಗಿರುತ್ತದೆ.**
74112 50447

**ಮಾರಾಟಕ್ಕೆ ಇವೆ**
ಹಳೆಯ ಚಪ್ಪಟಿ ಕಲ್ಲುಗಳು ಮಾರಾಟಕ್ಕಿವೆ.
ಸಂಪರ್ಕಿಸಿರಿ :
99028 78035

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ವಯೋವೃದ್ಧರನ್ನು, ವಯೋವೃದ್ಧ ರೋಗಿಗಳನ್ನು ನೋಡಿಕೊಳ್ಳಲು ಬೇಕಾಗಿದ್ದಲ್ಲಿ ಸಂಪರ್ಕಿಸಿ
99024 64522
96864 55820
(ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ)

**ಪತ್ರ ಕಳೆದಿರುತ್ತದೆ**
ಶೀಲಾ ಹೆಸರಿನಲ್ಲಿರುವ ಸೈಟ್ ನಂ.173, ಸುಬ್ರಮಣ್ಯ ಲೇಔಟ್ (ಬಡಾವಣೆ) ಗಡೆಕೊಪ್ಪ ರೈಸ್ ಮಿಲ್ ಹಿಂಭಾಗ, ಎಸ್.ಎಸ್. ಹಾಸ್ಪಿಟಲ್ ಸಮೀಪ ದಾವಣಗೆರೆಯಲ್ಲಿನ ಖಾಲಿ ಸೈಟ್‌ನ ಪತ್ರಗಳು ದಿನಾಂಕ 5.4.2021ರಂದು ಬಸ್ ಸ್ಟ್ಯಾಂಡ್ ಸಮೀಪ ಮಾರ್ಕೆಟ್‌ನಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕಲ್ಲಿ ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
94813 64914, 73384 49691

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**ಮಾರಾಟಕ್ಕೆ ಇವೆ**
ಉಪಯೋಗಿಸಿರುವ ಸಾರವಿ ಪೋಲ್ಸ್ ಮಾರಾಟಕ್ಕಿವೆ.
ಸಂಪರ್ಕಿಸಿರಿ :
99028 78035

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
ಮೊ. : 88677 75564

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಮಹಿಳೆ ಬೇಕಾಗಿದ್ದಾರೆ.
ಊಟ, ವಸತಿ, ವ್ಯವಸ್ಥೆ ಇದೆ.
ಸಂಬಳ ರೂ. 20,000. ಸಂಪರ್ಕಿಸಿ
90209 05000

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ, ದಾವಣಗೆರೆ
74112 50447

**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ 2BHK, North Facing, Corner House, 3ನೇ 'ಬಿ' ಮೇನ್ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ.
70195 55707


**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಮನೆ ನೀರಿನ ತೊಟ್ಟಿಯನ್ನು ಸಿನ್ ಟ್ಯಾಂಕ್ ಮಿಷನ್‌ನಲ್ಲಿ ಕ್ಲೀನಿಂಗ್ ಮಾಡಲಾಗುತ್ತದೆ.**
99863 61250
91132 85992

## ಪುಣ್ಯಸ್ಮರಣೆ

9ನೇ ವರ್ಷ | 4ನೇ ವರ್ಷ





ಉಸಿರು ಹೋದರೂ ಹೆಸರು ಉಳಿಸಿದ

**ದಿ|| ಎನ್. ವೀರೇಶ್**
ನಿಧನ : 08.05.2012

**ದಿ|| ನಿರುಪಮ ವೀರೇಶ್**
ನಿಧನ : 15.09.2017

ಸದಾ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿದೆ.
ನಿಮ್ಮ ಅಂತಃಕರಣ, ನಿಮ್ಮ ಶ್ರಮ, ಸಾತ್ವಿಕ ಜೀವನ ಮತ್ತು ಜೀವನೋತ್ಸಾಹ
ನಮ್ಮೆಲ್ಲರ ಬದುಕಿನ ದಾರಿ ದೀಪ, ನಿಮ್ಮ ನೆನಪೇ ನಮ್ಮ ಉಸಿರು,
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ,

ಸದಾ ನಿಮ್ಮ ಸ್ಮರಣೆಯಲ್ಲಿರುವ......

**ಎನ್.ಸಿ. ನಾಗಪ್ಪ ಮತ್ತು ಕುಟುಂಬ ವರ್ಗ**
ಹಾಗೂ ಬಂಧು-ಬಳಗ ಮತ್ತು ಸ್ನೇಹಿತರು.


## ಮಾರುತಿರಾವ್ ಜಾಧವ್ ನಿಧನ



ದಾವಣಗೆರೆ ಭರಮೋಜಿ ಗಲ್ಲಿ, ಶಿವಾಜಿ ನಗರ ವಾಸಿ ಮಾಜಿ ನಗರಸಭೆ ಅಧ್ಯಕ್ಷರಾದ ದಿ. ಜೆ. ಗಣೇಶರಾವ್ ಜಾಧವ್ ಅವರ ದ್ವಿತೀಯ ಪುತ್ರ ಹಾಗೂ ತೀರ್ಥರಾಮೇಶ್ವರ ಬಸ್ ಮಾಲೀಕರಾದ **ಮಾರುತಿರಾವ್ ಜಾಧವ್** ಅವರು ದಿನಾಂಕ 7.5.2021ರ ಶುಕ್ರವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶನಿವಾರ ಬೆಳಿಗ್ಗೆ 9.30ರವರೆಗೆ ಶಿವಾಜಿ ನಗರದ ಗಣೇಶರಾವ್ ಸರ್ಕಲ್‌ನ ಮೃತರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕಿಡಲಾಗುವುದು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.5.2021ರ ಶನಿವಾರ ಬೆಳಿಗ್ಗೆ 10.30ಕ್ಕೆ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. 98449-69738, 99160-09666**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 06.05.2021ರಂದು ಲಿಂಗೈಕ್ಯರಾದ
**ಶ್ರೀ ಬಿಳಿಚೋಡು ಶೆಟ್ರು ಉಮೇಶ್**
(ಮಾಗಾನಹಳ್ಳಿ ಬಸಪ್ಪನವರ ಮೊಮ್ಮಗ) ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


✧ ಮಾಗಾನಹಳ್ಳಿ ಬಸವರಾಜಪ್ಪ, ಕಾಯಿಪೇಟೆ. ✧ ಮಾಗಾನಹಳ್ಳಿ ಬಸವರಾಜಪ್ಪ, ಬಸವೇಶ್ವರ ಕಿರಾಣಿ ಅಂಗಡಿ, ಕೊಂಡಜ್ಜಿ ರಸ್ತೆ. ✧ ಮಾಗಾನಹಳ್ಳಿ ವಿರೂಪಾಕ್ಷಪ್ಪನವರ ಮಕ್ಕಳು ಕಾಯಿಪೇಟೆ ✧ ಮಾಗಾನಹಳ್ಳಿ ಗುರುಪಾದಪ್ಪನವರ ಮಕ್ಕಳಾದ ಬಸವರಾಜ್, ಮಂಜುನಾಥ್ ಹಾರ್ಡ್‌ವೇರ್ಸ್ & ಪೇಂಟ್ಸ್, ಚಾಮರಾಜಪೇಟೆ. ✧ ಮಾಗಾನಹಳ್ಳಿ ಬಕ್ಕೇಶ್, ಮಂಜುನಾಥ್ ಟ್ರೇಡರ್ಸ್, ಚಾಮರಾಜಪೇಟೆ ✧ ಮಾಗಾನಹಳ್ಳಿ ಬಂಧು-ಮಿತ್ರರು, ದಾವಣಗೆರೆ.

## ಹರಿಹರ : 57.35 ಮಿ.ಮೀ. ಮಳೆ

ದಾವಣಗೆರೆ, ಮೇ 7- ಮೇ 5 ರಂದು ಹರಿಹರ ತಾಲ್ಲೂಕಿನಲ್ಲಿ ಅತಿ ಹೆಚ್ಚು 57.35 ಮಿ.ಮೀ. ಮಳೆಯಾಗಿದ್ದು, ಜಿಲ್ಲೆಯಲ್ಲಿ ಸರಾಸರಿ 24.60 ಮಿ.ಮೀ ಮಳೆಯಾಗಿದೆ. ಒಟ್ಟಾರೆ 41.90 ಲಕ್ಷ ರೂ. ನಷ್ಟ ಸಂಭವಿಸಿರುವ ಅಂದಾಜು ಮಾಡಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ 17.31 ಮಿ.ಮೀ ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 17.56 ಮಿ.ಮೀ, ಹೊನ್ನಾಳಿ ತಾಲ್ಲೂಕಿನಲ್ಲಿ 17.9 ಮಿ.ಮೀ ಹಾಗೂ ಜಗಳೂರು ತಾಲ್ಲೂಕಿನಲ್ಲಿ 12.9 ಮಿ.ಮೀ ವಾಸ್ತವ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 24.60 ಮಿ.ಮೀ ವಾಸ್ತವ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 1 ಎಕರೆ ಅಡಿಕೆ ಬೆಳೆ ಹಾನಿಯಾಗಿದ್ದು, ಅಂದಾಜು 60 ಸಾವಿರ ರೂ. ನಷ್ಟ ಸಂಭವಿಸಿರುತ್ತದೆ. ಹರಿಹರ ತಾಲ್ಲೂಕಿನಲ್ಲಿ 604 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು, ಅಂದಾಜು 39.40 ಲಕ್ಷ ರೂ., ಹೊನ್ನಾಳಿಯಲ್ಲಿ 0.20 ಎಕರೆ ಎಲೆ ಬಳ್ಳಿ ಬೆಳೆ ಹಾನಿಯಾಗಿದ್ದು, ಅಂದಾಜು 30 ಸಾವಿರ ರೂ., ನ್ಯಾಮತಿಯಲ್ಲಿ 2 ಪಕ್ಕಾ ಮನೆ ಭಾಗಶಃ ಹಾನಿಯಾಗಿದ್ದು, ಅಂದಾಜು 1 ಲಕ್ಷ ರೂ., ಚನ್ನಗಿರಿ ತಾ.ನಲ್ಲಿ 2 ಪಕ್ಕಾ ಮನೆ ಭಾಗಶಃ ಹಾನಿಯಾಗಿದೆ.

## ತೃತೀಯ ವರ್ಷದ ಪುಣ್ಯಸ್ಮರಣೆ



**ದಿ|| ಊರಬಾಗಿಲ ಶ್ರೀಮತಿ ಗೌರಮ್ಮ ಬಸಾಪುರ**
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು,
ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತಿ : ಎಸ್. ನಿಜಲಿಂಗಪ್ಪ ಮತ್ತು ಮಕ್ಕಳು
ಬಿ.ಎನ್. ಸುಧಾ, ಬಿ.ಎನ್. ರೇವಣಸಿದ್ದಪ್ಪ,
ಬಿ.ಎನ್. ಮಹೇಶ್ ಮತ್ತು ಮೊಮ್ಮಕ್ಕಳು, ಸೊಸೆಯಂದಿರು
ಊರಬಾಗಿಲ ವಂಶಸ್ಥರು ಹಾಗೂ ಬಂಧು-ಮಿತ್ರರು ಬಸಾಪುರ.

## ದ್ವಿತೀಯ ವರ್ಷದ ಚಿರಸ್ಮರಣೆ



**ದಿ|| ಶ್ರೀಮತಿ ಸಾವಿತ್ರಮ್ಮ ಬೂಸ್ನೂರು**
ಶಿವೈಕ್ಯ 08.05.2019
ದಿ|| ಬೂಸ್ನೂರು ನೀಲಕಂಠಪ್ಪ ಅವರ ಧರ್ಮಪತ್ನಿ
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ನಿಮ್ಮ ಚಿರ ನೆನಪಿನಲ್ಲಿರುವ,

ಮಕ್ಕಳು : ಬೂಸನೂರು ಪ್ರಕಾಶ್
ಮತ್ತು ಸಹೋದರ, ಸಹೋದರಿಯರು ಹಾಗೂ ಆತ್ಮೀಯರು
**ಪ್ರಕಾಶ ಟಿವಿ ಸೆಂಟರ್**
21, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರೋಡ್, ದಾವಣಗೆರೆ. ಫೋ.254565

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಆರೋಗ್ಯ ಕೇಂದ್ರಕ್ಕೆ ಸಂಸದ ದೇವೇಂದ್ರಪ್ಪ ಭೇಟಿ : ಪರಿಶೀಲನೆ



**ಹರಪನಹಳ್ಳಿ**

ಹರಪನಹಳ್ಳಿ, ಮೇ 7- ಸಂಸದ ವೈ. ದೇವೇಂದ್ರಪ್ಪ ಅವರು ತಾಲ್ಲೂ ಕಿನ ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ತಮ್ಮ ಹುಟ್ಟುಹಬ್ಬವನ್ನು ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿ ಸರಳವಾಗಿ ಆಚರಿಸಿಕೊಂಡರು. ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ. ಮಾಸ್ಕ್, ಸ್ಯಾನಿಟೈಸರ್, ರ್ಯಾಪಿಡ್ ಕಿಟ್ ಇಲ್ಲ, ಔಷಧೋಪಕರಣಗಳು ಇಲ್ಲದಿರುವುದನ್ನು ಕಂಡು ದೇವೇಂದ್ರಪ್ಪ ಅವರು ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಯವರ ಮೇಲೆ ಗರಂ ಆದರು. ಮುಂದೆ ಈ ರೀತಿ ಯಾವುದೇ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದರು.

ಆಸ್ಪತ್ರೆಯಲ್ಲಿನ ಆಕ್ಸಿಜನ್ ಕೊಠಡಿಯನ್ನು ಕಳಪೆಯಾಗದಂತೆ ನಿರ್ಮಿಸಬೇಕೆಂದು ಸಂಬಂಧ ಪಟ್ಟ ಇಲಾಖೆಗೆ ಎಚ್ಚರಿಕೆ ನೀಡಿದರು. ಇದೇ ಸಂದರ್ಭದಲ್ಲಿ ವೈದ್ಯಾಧಿಕಾರಿ ಭುವನೇಶ್ವರ್, ಮುಖಂಡರಾದ ಷಣ್ಮುಖಪ್ಪ, ವೈ. ಟಿ. ಕೊಟ್ರೇಶ್, ಪೂಜಾರ್ ಮರಿಯಪ್ಪ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಮೇ 10ರಿಂದ ಸಂಪೂರ್ಣ ಲಾಕ್‌ಡೌನ್

(1ನೇ ಪುಟದಿಂದ) ತಿಳಿಸಿದ್ದಾರೆ.

**ಪಾಸ್ ಇಲ್ಲ :** ಲಾಕ್‌ಡೌನ್ ವೇಳೆ ಜನರ ಸಂಚಾರಕ್ಕೆ ಸರ್ಕಾರದಿಂದ ಪಾಸ್ ಕೊಡುವುದಿಲ್ಲ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಹೇಳಿದ್ದು, ಜನರು ಲಾಕ್‌ಡೌನ್ ವೇಳೆ ಹೊರ ಬಂದರೆ ತುರ್ತು ಸಂದರ್ಭ ಇತ್ತು ಎಂದು ಅವರೇ ಸಾಬೀತು ಪಡಿಸಿಕೊಳ್ಳಬೇಕು ಎಂದಿದ್ದಾರೆ. ಪ್ರಸಕ್ತ ಸ್ವಲ್ಪ ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಲಾಕ್‌ಡೌನ್ ಅವಧಿಯಲ್ಲಿ ಅವುಗಳನ್ನೂ ಮುಚ್ಚಲಾಗುವುದು ಎಂದವರು ಹೇಳಿದ್ದಾರೆ.

### ಅನುಮತಿ ಇರುವುದು

(1ನೇ ಪುಟದಿಂದ)

- ನ್ಯಾಯ ಬೆಲೆ ಅಂಗಡಿಗಳು
- ದೂರಸಂಪರ್ಕ, ಇಂಟರ್‌ನೆಟ್, ಪ್ರಸಾರ, ಕೇಬಲ್
- ಐಟಿ ಮತ್ತು ಐಟಿಇಎಸ್ ಕಂಪನಿಗಳು
- ಸ್ಥಳದಲ್ಲೇ ಕಾರ್ಮಿಕರು ಲಭ್ಯವಿರುವ ಕೈಗಾರಿಕೆಗಳು
- ಸ್ಥಳದಲ್ಲೇ ಕಾರ್ಮಿಕರು ಲಭ್ಯವಿರುವ ಕಟ್ಟಡ ನಿರ್ಮಾಣ
- ಅಗತ್ಯ ವಸ್ತುಗಳ ತಯಾರಿಕಾ ಘಟಕ, ನಿರಂತರ ಕಾರ್ಯನಿರ್ವಹಣೆಯ ಘಟಕಗಳು
- ಅಂತ್ಯಸಂಸ್ಕಾರದಲ್ಲಿ ಗರಿಷ್ಠ ಐದು ಜನ
- ಮದುವೆ ಸಮಾರಂಭಗಳಲ್ಲಿ ಗರಿಷ್ಠ 50 ಜನ

## ಲಸಿಕೆಗೂ ಕಾಲೇ ಗತಿ

(1ನೇ ಪುಟದಿಂದ) ನೆರೆಹೊರೆಯಲ್ಲಿರುವ ದಿನಸಿ ಅಂಗಡಿ ಹಾಗೂ ಹೋಟೆಲ್‌ಗಳಿಗೆ ಕಾಲ್ನಡಿಗೆಯಲ್ಲಿ ತೆರಳಿ ಖರೀದಿ ಮಾಡಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ತಿಳಿಸಿದ್ದಾರೆ. ಕೈಗಾರಿಕೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಜನರು ತೆರಳುವಂತಿಲ್ಲ. ಸ್ಥಳದಲ್ಲೇ ವಾಸ್ತವ್ಯ ಮಾಡಿಕೊಂಡು ಕೆಲಸ ಮಾಡಬೇಕು ಎಂದವರು ಹೇಳಿದ್ದಾರೆ.

ಲಸಿಕೆ ಪಡೆಯಲೂ ಸಹ ವಾಹನ ಬಳಸುವಂತಿಲ್ಲ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡು, ಕಾಲ್ನಡಿಗೆಯಲ್ಲೇ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಲಸಿಕೆ ಪಡೆಯಬೇಕು ಎಂದವರು ಹೇಳಿದ್ದಾರೆ.

# ಜಿಲ್ಲೆಯಲ್ಲಿ ಕೋವಿಡ್ ಪ್ರಕರಣ ಹೆಚ್ಚಳಕ್ಕೆ ಕಳವಳ

> ಜಿಲ್ಲೆಯಲ್ಲಿ ಈ ವರ್ಷದ ಏಪ್ರಿಲ್ ತಿಂಗಳಿನಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಮುಖವಾಗುತ್ತಿದ್ದು, ಎರಡನೇ ಅಲೆ ಇರುವುದು ಕಂಡುಬಂದಿದೆ. ಜಿಲ್ಲೆಯಲ್ಲಿ ಮಾರ್ಚ್ 2020 ರಿಂದ 2021 ರ ಮೇ 5 ರವರೆಗೆ ಒಟ್ಟು 27,722 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, 290 ಜನರು ಮೃತಪಟ್ಟಿದ್ದಾರೆ. ಇಲ್ಲಿಯವರೆಗೂ ಒಟ್ಟು 5,12,226 ಪರೀಕ್ಷೆಗಳನ್ನು ಮಾಡಲಾಗಿದೆ. ಈವರೆಗೆ 3,99,486 ಆರ್.ಟಿ.ಪಿ.ಸಿ.ಆರ್ ಪರೀಕ್ಷೆ ಮಾಡಿದ್ದು, 18,764 ಪಾಸಿಟಿವ್ ಪ್ರಕರಣ ಬಂದಿದೆ. 1,14,090 ರ್ಯಾಪಿಡ್ ಅಂಟಿಜೆನ್ ಪರೀಕ್ಷೆ ಮಾಡಲಾಗಿದ್ದು, 8,950 ಪಾಸಿಟಿವ್ ಪ್ರಕರಣ ಬಂದಿದೆ
>
> **- ಡಾ.ರಾಘವನ್,** ಜಿಲ್ಲಾ ಸರ್ವೇಕ್ಷಣಾಧಿಕಾರಿ

ದಾವಣಗೆರೆ, ಮೇ 7- ಜಿಲ್ಲಾದ್ಯಂತ ಒಟ್ಟು 2,425 ಬೆಡ್‌ಗಳಿದ್ದು 962 ಬೆಡ್‌ಗಳು ಭರ್ತಿಯಾಗಿವೆ. ಇನ್ನೂ 1,463 ಬೆಡ್‌ಗಳು ಲಭ್ಯವಿವೆ. ಮೇ 6 ರಂದು ಐಸೋಲೇಷನ್, ಆಕ್ಸಿಜನ್, ವೆಂಟಿಲೇಟರ್ ಸೇರಿದಂತೆ ಒಟ್ಟು 701 ಬೆಡ್‌ಗಳು ಪಾಸಿಟಿವ್ ಪ್ರಕರಣಗಳಿಗೆ ಭರ್ತಿಯಾಗಿತ್ತು ಎಂದು ತಿಳಿಸಿದರು. ಇಲ್ಲಿಯವರೆಗೆ 242 ವಯಾಲ್ ರೆಮ್ ಡಿಸಿವಿರ್ ದಾಸ್ತಾನು ಇದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕೋವಿಡ್-19 ನಿಯಂತ್ರಣ ಕುರಿತು ಕೈಗೊಳ್ಳಲಾಗಿರುವ ಹಾಗೂ ಕೈಗೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲೆಯ ಜನಪ್ರತಿನಿಧಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಶುಕ್ರವಾರ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎ. ಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಅವರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಈ ವರ್ಷ ಏಪ್ರಿಲ್ 2021 ರವರೆಗೆ 3,485 ಕೋವಿಡ್ ಪ್ರಕರಣಗಳು ದಾಖಲಾಗಿದ್ದು, ಇಲ್ಲಿಯವರೆಗೆ 2,534 ಸಕ್ರಿಯ ಪ್ರಕರಣಗಳಿವೆ. ಮೊದಲನೇ ಅಲೆಯಲ್ಲಿ 264 ಜನರು ಮೃತರಾಗಿದ್ದು, ಎರಡನೇ ಅಲೆಯಲ್ಲಿ ಏಪ್ರಿಲ್ 2021 ರಿಂದ ಇಲ್ಲಿಯವರೆಗೆ 26 ಜನರು ಮೃತಪಟ್ಟಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 1,583 ಸಕ್ರಿಯ ಪ್ರಕರಣಗಳಿದ್ದು, ಹರಿಹರ 261, ಜಗಳೂರು 141, ಚನ್ನಗಿರಿ 213, ಹೊನ್ನಾಳಿ 241 ಹಾಗೂ ಹೊರ ಜಿಲ್ಲೆಯಿಂದ 95 ಸಕ್ರಿಯ ಪ್ರಕರಣಗಳು ಇದ್ದು, ಪ್ರಸ್ತುತ ಚಿಕಿತ್ಸೆ ಪಡೆಯುತ್ತಿದ್ದಾರೆ. ದಾವಣಗೆರೆಯಲ್ಲಿ 886, ಚನ್ನಗಿರಿ 130, ಹರಿಹರ 131, ಜಗಳೂರು 57, ಹೊನ್ನಾಳಿ 91 ಸೇರಿದಂತೆ ಒಟ್ಟು 1,295 ಜನರು ಹೋಮ್ ಐಸೋಲೇಷನ್ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

**78 ವೆಂಟಿಲೇಟರ್ :** ಜಿಲ್ಲೆಯ ಒಟ್ಟು 8 ಕೋವಿಡ್ ಆಸ್ಪತ್ರೆಗಳಲ್ಲಿ 78 ವೆಂಟಿಲೇಟರ್‌ಗಳಿವೆ. ಚಿಗಟೇರಿ ಆಸ್ಪತ್ರೆಯಲ್ಲಿ 41 ಇದ್ದು, ಅವುಗಳಲ್ಲಿ 20 ವೆಂಟಿಲೇಟರ್‌ಗಳನ್ನು ಕೋವಿಡ್‌ಗಾಗಿ ಬಳಸಲಾಗುತ್ತಿದೆ. ಇನ್ನೂ 15 ವೆಂಟಿಲೇಟರ್‌ಗಳನ್ನು ನುರಿತ ಸಿಬ್ಬಂದಿಗಳ ಕೊರತೆಯಿಂದ ಬಳಸಲು ಸಾಧ್ಯವಾಗಿಲ್ಲ. ಶೀಘ್ರದಲ್ಲಿ ನುರಿತ ಸಿಬ್ಬಂದಿಗಳ ನೇರ ನೇಮಕಾತಿ ನಡೆಸಲಾಗುವುದು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ವೆಂಟಿಲೇಟರ್ ಲಭ್ಯವಿದ್ದೂ ಸಿಬ್ಬಂದಿ ಕೊರತೆ ಕಾರಣ ಬಳಕೆಯಾಗುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಕೂಡಲೇ ಅಗತ್ಯ ಸಿಬ್ಬಂದಿಗಳ ನೇಮಕಕ್ಕೆ ಕ್ರಮ ವಹಿಸುವಂತೆ ತಾಕೀತು ಮಾಡಿದರು.

**ಆಂಬ್ಯುಲೆನ್ಸ್ ಮತ್ತು ಮುಕ್ತಿ ವಾಹನ:** ಜಿಲ್ಲೆಯಲ್ಲಿ ಒಟ್ಟು 76 ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ ಜಿಲ್ಲಾಡಳಿತದಿಂದ ಜಿಲ್ಲಾಸ್ಪತ್ರೆಗೆ 1 ಎ.ಎಲ್.ಎಸ್., 1 ಬಿ.ಎಲ್.ಎಸ್. ಸೇರಿದಂತೆ ಒಟ್ಟು 7 ಆಂಬ್ಯುಲೆನ್ಸ್‌ಗಳನ್ನು ನೀಡಲಾಗಿದ್ದು ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಕೋವಿಡ್ ಸೋಂಕಿನಿಂದ ಮೃತಪಟ್ಟ ದೇಹಗಳನ್ನು ಸಾಗಣೆ ಮಾಡಲು ಜಿಲ್ಲಾಡಳಿತದಿಂದ 2 ಮುಕ್ತಿ ವಾಹನಗಳನ್ನು ಹಾಗೂ ಮಹಾನಗರ ಪಾಲಿಕೆಯಿಂದ 1 ಮುಕ್ತಿ ವಾಹನ ಕಾರ್ಯ ನಿರ್ವಹಿಸುತ್ತಿದೆ.

**ಕೋವಿಡ್ ಕೇರ್ ಸೆಂಟರ್ :** ದಾವಣಗೆರೆ ತಾಲ್ಲೂಕಿನಲ್ಲಿ ಜೆ.ಹೆಚ್.ಪಟೇಲ್ ಮತ್ತು ಬಾಡಾ ಕ್ರಾಸ್ ಹಾಸ್ಟೆಲ್‌ನಲ್ಲಿ ಕೋವಿಡ್ ಕೇರ್ ಸೆಂಟರ್ ಇದ್ದು ಇಲ್ಲಿಯವರೆಗೆ 52 ಜನ ದಾಖಲಾಗಿದ್ದಾರೆ. 32 ಜನ ಬಿಡುಗಡೆಯಾಗಿದ್ದು, ಪ್ರಸ್ತುತ 8 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊನ್ನಾಳಿಯಲ್ಲಿ ಒಟ್ಟು 80 ಬೆಡ್ ಸಾಮರ್ಥ್ಯವುಳ್ಳ ಕೋವಿಡ್ ಕೇರ್ ಸೆಂಟರ್ ಇದ್ದು 16 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಹರಿಹರದ ಗುತ್ತೂರು ಗ್ರಾಮದಲ್ಲಿ 130 ಹಾಸಿಗೆ ಸಾಮರ್ಥ್ಯವುಳ್ಳ ಕೋವಿಡ್ ಕೇರ್ ಸೆಂಟರ್ ಇದ್ದು, 83 ಜನ ದಾಖಲಾಗಿದ್ದು 44 ಜನ ಬಿಡುಗಡೆಯಾಗಿದ್ದಾರೆ. ಪ್ರಸ್ತುತ 39 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚನ್ನಗಿರಿಯ ರಾಣಿ ಚೆನ್ನಮ್ಮ ವಸತಿಯುತ ಶಾಲೆಯಲ್ಲಿ 100 ಬೆಡ್ ಸಾಮರ್ಥ್ಯದ ಕೋವಿಡ್ ಕೇರ್ ಸೆಂಟರ್ ಇದ್ದು, 11 ಜನ ಬಿಡುಗಡೆಯಾಗಿದ್ದು, ಪ್ರಸ್ತುತ 9 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಗಳೂರು ತಾಲ್ಲೂಕಿನಲ್ಲಿ 45 ಜನ ಕೋವಿಡ್ ಕೇರ್ ಸೆಂಟರ್‌ಗೆ ದಾಖಲಾಗಿದ್ದರು, ಈ ಪೈಕಿ ಸದ್ಯ 24 ಜನ ಇದ್ದಾರೆ ಎಂದು ಆಯಾ ತಾಲ್ಲೂಕಿನ ತಹಶೀಲ್ದಾರರು ಮಾಹಿತಿ ನೀಡಿದರು.

# ಕೊರೊನಾ ತಡೆಗಟ್ಟಲು ಲಾಕ್‌ಡೌನ್ ಪರಿಹಾರವಲ್ಲ

(1ನೇ ಪುಟದಿಂದ) ತಪ್ಪುಗಳನ್ನು ಒಪ್ಪಿಕೊಂಡು ಸರ್ಕಾರ ಮತ್ತು ಜಿಲ್ಲಾಡಳಿತ ಇದೀಗ ಪರಿಸ್ಥಿತಿ ಇನ್ನಷ್ಟು ಕೈ ಮೀರದಂತೆ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿರುವ ಅವರು, ರಾಜ್ಯದ ಬೆಂಗಳೂರು ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಕೊರೊನಾ ತೀವ್ರವಾಗಿದ್ದು, ದಾವಣಗೆರೆಯಲ್ಲಿ ಕೊರೊನಾ ಹೆಚ್ಚಳವಾಗದಂತೆ ತಡೆಯುವ ಕೆಲಸ ನಮ್ಮಿಂದನೇ ಆಗಬೇಕಿದ್ದು, ಅವಶ್ಯವಾಗಿ ಹೊರ ಬರಬೇಕೆಂದರೆ ಮಾಸ್ಕ್ ಧರಿಸಿ, ಅಂತರ ಕಾಪಾಡಿ ಕೊಳ್ಳುವ ಮೂಲಕ ಜಾಗರೂಕತೆಯಿಂದ ಇರ ಬೇಕೆಂದು ನಾಗರಿಕರಲ್ಲಿ ಮನವಿ ಮಾಡಿದರು.

ಜಿಲ್ಲೆಯಲ್ಲಿ ಸುಮಾರು 15 ಲಕ್ಷ ಜನಸಂಖ್ಯೆ ಇದ್ದು, ಕನಿಷ್ಟ ಪಕ್ಷ ಪ್ರತಿದಿನ 15 ಸಾವಿರ ಜನ ರಿಗೆ ಲಸಿಕೆ ಹಾಕಬೇಕು. 8-10 ಸಾವಿರ ಲಸಿಕೆ ಜಿಲ್ಲೆಗೆ ಬಂದರೆ ಏನು ಉಪಯೋಗವಾಗುವು ದಿಲ್ಲ. ಜಿಲ್ಲಾಡಳಿತ ಈ ಕೂಡಲೇ ಸರ್ಕಾರಕ್ಕೆ ಸಮರ್ಪಕ ಲಸಿಕೆ, ಆಕ್ಸಿಜನ್ ಹಾಗೂ ರೆಮ್ ಡಿಸಿವಿರ್ ಇಂಜೆಕ್ಷನ್ ಪೂರೈಕೆ ಮಾಡಲು ಒತ್ತಡ ಹಾಕುವಂತೆ ಆಗ್ರಹಿಸಿದ್ದು, ಪ್ರತಿಯೊಬ್ಬರಿಗೂ ಉಚಿತವಾಗಿ ಲಸಿಕೆ ಮತ್ತು ಅವಶ್ಯವಿರುವವರಿಗೆ ರೆಮ್ಡಿಸಿವಿರ್ ಚುಚ್ಚುಮದ್ದನ್ನು ಉಚಿತವಾಗಿ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ 41 ವೆಂಟಿಲೇಟರ್‌ಗ ಳಿದ್ದರೂ ಸಹ ಕೇವಲ 20 ವೆಂಟಿಲೇಟರ್‌ಗಳನ್ನು ಮಾತ್ರ ಬಳಸಿಕೊಳ್ಳ ಲಾಗುತ್ತಿದ್ದು, ಇನ್ನು 21 ವೆಂಟಿಲೇಟರ್‌ಗಳನ್ನು ಏಕೆ ಬಳಸಿಕೊಳ್ಳುತ್ತಿಲ್ಲ? ವೆಂಟಿಲೇಟರ್‌ಗಳನ್ನು ನಿರ್ವಹಿಸುವ ಸಿಬ್ಬಂದಿಗಳನ್ನು ನೇಮಿಸಿಕೊಂಡಿಲ್ಲವೇ? ಎಂದು ಅವರುಗಳು ಪ್ರಶ್ನಿಸಿದ್ದಾರೆ.

ಲಾಕ್‌ಡೌನ್ ಮತ್ತು ಕರ್ಫ್ಯೂ ಹೆಸರಿನಲ್ಲಿ ಜನರ ಪ್ರಶ್ನಿಸುವ ಹಕ್ಕನ್ನು ಕಸಿದುಕೊಂಡಂತಾಗ ಲಿದ್ದು, ಅಧಿಕಾರಿಗಳು ಜನರನ್ನು ದಾರಿ ತಪ್ಪಿಸಲು ಲಾಕ್‌ಡೌನ್ ಮತ್ತು ಕರ್ಫ್ಯೂನ್ನು ಬಳಸಿಕೊಂಡು ಜನರಿಗೆ ಸರ್ಕಾರ ಮತ್ತು ಜಿಲ್ಲಾಡಳಿತದಿಂದ ತಲುಪಬೇಕಾದ ಅಗತ್ಯ ವೈದ್ಯಕೀಯ ಸೌಲಭ್ಯ ಗಳು ದೊರೆಯುತ್ತಿಲ್ಲ ಎಂದು ಅವರು ದೂರಿದ್ದಾರೆ.

## ಪೊಲೀಸರಿಗೆ ಹವೆ ಯಂತ್ರ ವಿತರಣೆ



ದಾವಣಗೆರೆ,ಮೇ 6- ಸ್ಥಳೀಯ ವಿದ್ಯಾನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳಿಗೆ ಸಬ್ ಇನ್ ಸ್ಪೆಕ್ಟರ್ ಶ್ರೀಮತಿ ರೂಪ ಅವರ ಸಮ್ಮುಖದಲ್ಲಿ ಹವೆ ಯಂತ್ರಗಳನ್ನು ದಿ. ಶಾಮನೂರು ಕಲ್ಲೇಶಪ್ಪನವರ ಪುತ್ರರೂ ಆದ ಎಪಿಎಂಸಿ ನಿರ್ದೇಶಕ ಎಸ್.ಕೆ. ಪವಿತ್ರ ಅವರು ನೀಡಿದರು.

## ತುರ್ತು ಸೇವೆಗೆ ಉಚಿತ ಆಟೋ



ದಾವಣಗೆರೆ, ಮೇ 7- ಜನತಾ ಕರ್ಫ್ಯೂ ಸಂದರ್ಭದಲ್ಲಿ ನಾಗರಾಜ್ ಲೋಕಿಕೆರೆ ಅಭಿಮಾನಿಗಳ ಬಳಗದಿಂದ ತುರ್ತು ಸೇವೆಗಳಿಗಾಗಿ ಉಚಿತ ಆಟೋ ಸೇವೆಯನ್ನು ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಗರ್ಭಿಣಿ ಸ್ತ್ರೀಯರು, ವೃದ್ಧರು, ರೋಗಿಗಳು ತುರ್ತಾಗಿ ಪ್ರಯಾಣಿಸಲು ನಾಗರಾಜ್-9844768699, ಕೃಷ್ಣಪ್ಪ-7760207337, ನಾಗೇಶ್-9110206154 ಸಂಪರ್ಕಿಸಲು ತಿಳಿಸಿದ್ದಾರೆ.

## ಹೆಚ್.ಎಂ. ಚಂದ್ರ ಕುಮಾರ್ ಆಯ್ಕೆ

ಹೊನ್ನಾಳಿ, ಮೇ 7- ಹಿರಿಯ ನಾಗರಿಕರ ಸಹಕಾರ ಸಂಘಕ್ಕೆ ಹೆಚ್.ಎಂ. ಚಂದ್ರ ಕುಮಾರ್ ಅಧ್ಯಕ್ಷರಾಗಿದ್ದಾರೆ. ಮಾಜಿ ಅಧ್ಯಕ್ಷ ವೀರಪ್ಪ, ಕಾರ್ಯದರ್ಶಿ ಕೆ.ಎಸ್.ಸಿದ್ದಬಸಪ್ಪ, ನಿರ್ದೇಶಕ ರಾದ ಎಂ. ಬಾಬು, ಹೆಚ್. ನಾಗರಾಜಪ್ಪ, ಚಂದ್ರಪ್ಪ, ಅಂಬಲಿ ನರಸಪ್ಪ, ಗೌರಮ್ಮ ಉಪಸ್ಥಿತರಿದ್ದರು.

### ಓದುಗರ ಪತ್ರ

## ಆತ್ಮವಿಶ್ವಾಸವೊಂದಿದ್ದರೆ ಎಂತಹ ಕಾಯಿಲೆಯನ್ನಾದರೂ ಗೆಲ್ಲಬಹುದು

**ಮಾನ್ಯರೇ,**

ಆರೋಗ್ಯ ಸಂಪತ್ತೊಂದಿದ್ದರೆ ಉಳಿದೆಲ್ಲ ಸಂಪತ್ತನ್ನೂ ಪಡೆಯ ಬಹುದು. ದೇಶದಲ್ಲಿ ಹಬ್ಬುತ್ತಿರುವ ಮಹಾ ಮಾರಿ ಕೊರೊನಾ 2ನೇ ಅಲೆ ಜನರಲ್ಲಿ ಆತಂಕ ಮತ್ತು ಭಯ ಹುಟ್ಟಿಸಿದೆ. ಈ ಅಲೆಯು ಎಲ್ಲಿಯವರೆಗೆ ಇರುವುದೋ ಗೊತ್ತಿಲ್ಲ. ಕೋವಿಡ್ ಸೋಂಕಿತರು ಮತ್ತು ಅವರ ಬಂಧುಗಳು ಬೆಡ್ ಸಿಕ್ತಿಲ್ಲ, ಆಕ್ಸಿಜನ್ ಖಾಲಿಯಾಗಿದೆ ಎಂದು ನರಳಾಡುವುದನ್ನು ಪ್ರತಿ ನಿತ್ಯ ಕೇಳುತ್ತಿದ್ದೇವೆ. ಅನೇಕರು ಕೋವಿಡ್ ಭಯದಿಂದ ಆತ್ಮಹತ್ಯೆ ಮಾಡಿಕೊಳ್ಳುವರು, ಆಂಬ್ಯುಲೆನ್ಸ್ ಸಿಗದೆ ರಸ್ತೆಯಲ್ಲೇ ನರಳಿ ಸಾಯುವವರನ್ನು ನೋಡುತ್ತಿದ್ದೇವೆ.

ಕೊರೊನಾಗೆ ಹೆದರಬೇಡಿ. ಇದನ್ನು ತಡೆಗಟ್ಟಿ ಜಯಿಸುವುದು ನಮ್ಮ ಕೈಯಲ್ಲಿದೆ. ನಮ್ಮ ದೇಹದಲ್ಲಿ ಸಾಕಷ್ಟು ರೋಗ ನಿರೋಧಕ ಶಕ್ತಿ ಇದೆ ಎಂದು ಬೇಜವಾಬ್ದಾರಿ ತೋರಿದರೆ, ನಿಮ್ಮನ್ನೂ ಆವರಿಸದೆ ಬಿಡದು. ಸರ್ಕಾರದ ನಿಯಮಾವಳಿಗಳನ್ನು ಪಾಲಿಸುವ ಅವಶ್ಯಕತೆ ಇದೆ.

'ಆತ್ಮ ವಿಶ್ವಾಸ ಎಲ್ಲಾ ಜಯದ ಮೂಲ' ಏನನ್ನೇ ಕಳೆದು ಕೊಂಡರೂ ಆತ್ಮವಿಶ್ವಾಸವನ್ನು ಮಾತ್ರ ಯಾವ ಕಾರಣಕ್ಕೂ, ಯಾವ ಸಂದರ್ಭದಲ್ಲೂ ಕಳೆದು ಕೊಳ್ಳಬಾರದು. ಪೆಂಗ್ ಶುಯಿಲಿನ್, ಬೆಂಜಮಿನ್ ಫ್ರಾಂಕ್ಲಿನ್, ನಿಕ್ ವುಜಿಸಿಕ್, ಸ್ಟೀಫನ್ ಹಾಕಿಂಗ್ ಮುಂತಾದವರ ಯಶೋಗಾಥೆಗಳು ನಮ್ಮ ಬದುಕಿಗೆ ಪ್ರೇರಣೆಯಾಗುತ್ತವೆ. ಕೋವಿಡ್ ನಿಯಂತ್ರಣಕ್ಕೆ ಕೇವಲ ಸರ್ಕಾರ ಮಾತ್ರ ಪ್ರಯತ್ನ ಪಟ್ಟರೆ ಸಾಲದು ನಮ್ಮೆಲ್ಲರ ಪಾತ್ರ ಮುಖ್ಯವಾಗಿದೆ. ನಾವು ಮನೆಯಲ್ಲಿಯೇ ಇದ್ದರೆ ಅದೇ ದೊಡ್ಡ ಕೊಡುಗೆಯಾಗುತ್ತದೆ.

**- ಹೆಚ್. ಮಲ್ಲಿಕಾರ್ಜುನ್,** ಉಪನ್ಯಾಸಕರು, ಹರಪನಹಳ್ಳಿ.

# ಕೊರೊನಾ ಹತೋಟಿಗೆ ಎಲ್ಲಾ ರೀತಿಯಲ್ಲೂ ಸಜ್ಜು

(1ನೇ ಪುಟದಿಂದ) ದಿನೇ ದಿನೇ ಹೆಚ್ಚಾಗುತ್ತಿದ್ದು, ಸಂಪೂರ್ಣವಾಗಿ ಹತೋಟಿಗೆ ತರಲು ಸರ್ಕಾರ ಎಲ್ಲಾ ರೀತಿಯಲ್ಲಿ ಸಜ್ಜಾಗಿದೆ. ಸಾರ್ವಜನಿಕರು ತಮಗೆ ಕೊರೊನಾ ಬಂದಿದೆ ಎಂದು ಯಾವುದೇ ರೀತಿಯ ಭಯ ಪಡದೆ ಧೈರ್ಯದಿಂದ ಇರಬೇಕು. ಉದ್ವೇಗಕ್ಕೆ ಒಳಗಾಗದೆ ಏನೇ ಸಮಸ್ಯೆ ಬಂದರೂ ಅದನ್ನು ಸಮರ್ಥವಾಗಿ ಎದುರಿಸಲು ಮುಂದಾಗಬೇಕು. ಒಂದು ವಾರದೊಳಗೆ ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಸರಬರಾಜು ಆಗಲಿದ್ದು, ಸಾರ್ವಜನಿಕರು ಲಸಿಕೆಯ ಬಗ್ಗೆ ಯಾವುದೇ ರೀತಿಯ ಆತಂಕವನ್ನು ಇಟ್ಟುಕೊಳ್ಳಬಾರದು ಎಂದು ಹೇಳಿದರು.

ಸದರನ್ ಗ್ಯಾಸ್ ಲಿಮಿಟೆಡ್‌ಗೆ ಭೇಟಿ ನೀಡಿ, ಅಲ್ಲಿನ ಸಿಬ್ಬಂದಿಗಳ ಜೊತೆಯಲ್ಲಿ ಆಕ್ಸಿಜನ್ ಸರಬರಾಜು ಯಾವ ಪ್ರಮಾಣದಲ್ಲಿ ಇದೆ, ದಿನಕ್ಕೆ ಎಷ್ಟು ಟ್ಯಾಂಕರ್ ಸರಬರಾಜು ಮಾಡಲಾಗುತ್ತಿದೆ, ಇತ್ಯಾದಿ ಮಾಹಿತಿಗಳನ್ನು ಪಡೆದರು. ಜಿಲ್ಲೆಯಲ್ಲಿ ಯಾವುದೇ ರೀತಿಯ ಆಕ್ಸಿಜನ್ ಕೊರತೆ ಬರದಂತೆ ಸರಬರಾಜು ಮಾಡುವಂತೆ ಮತ್ತು ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಖರಣೆ ಮಾಡಿಕೊಂಡು ವಿತರಣೆ ಮಾಡುವಂತೆ ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಇರುವ ಕೊರೊನಾ ರೋಗಿಗಳ ಚಿಕಿತ್ಸಾ ಕೊಠಡಿಗೆ ಭೇಟಿ ನೀಡಿ ಅಲ್ಲಿರುವ ಕೊರೊನಾ ರೋಗಿಗಳನ್ನು ವಿಚಾರಿಸಿದರು. ರೋಗಿಗಳು ತಮ್ಮ ಸಮಸ್ಯೆಗಳನ್ನು ಸಚಿವರ ಬಳಿ ಹೇಳಿಕೊಂಡರು. ನಂತರ ಮಾತನಾಡಿದ ಸಚಿವರು, ಈ ಆಸ್ಪತ್ರೆಗೆ ಹೆಚ್ಚಿನ ಪ್ರಮಾಣದಲ್ಲಿ ವೆಂಟಿಲೇಷನ್‌ಗೆ ಆದ್ಯತೆ ನೀಡಲಾಗುವುದು. ವೈದ್ಯಕೀಯ ಅಧಿಕಾರಿಗಳು ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್‌ಪಿ ಹನುಮಂತರಾಯ, ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ಜಿಲ್ಲಾ ಆರೋಗ್ಯ ಅಧಿಕಾರಿ ನಾಗರಾಜ್, ಜಿಲ್ಲಾ ಆರೋಗ್ಯ ನೋಡಲ್ ಅಧಿಕಾರಿ ನಟರಾಜ್, ಜಿಲ್ಲಾ ಸರ್ವೇಕ್ಷಣ ಅಧಿಕಾರಿ ರಾಘವನ್, ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮೀ, ಎಇಇ ಬಿರಾದಾರ್, ತಾ.ಪಂ. ಇಓ ಗಂಗಾಧರನ್, ಸಿಪಿಐ ಸತೀಶ್ ಕುಮಾರ್, ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಡಾ. ಹನುಮನಾಯ್ಕ್, ಡಾ. ಸವಿತಾ, ಡಾ. ವಿಶ್ವನಾಥ ಕುಂದಗೋಳ ಮಠ, ಪಿಎಸ್‌ಐಗಳಾದ ಸುನೀಲ್ ಬಸವರಾಜ್ ತೆಲಿ, ಡಿ. ರವಿಕುಮಾರ್, ಪಿಡಿಓ ವಿಜಯಲಕ್ಷ್ಮಿ ಇನ್ನಿತರರು ಹಾಜರಿದ್ದರು.

## ಬೆಡ್‌ಗಳ ವಿವರ ನಿತ್ಯ ಪ್ರಕಟ

(1ನೇ ಪುಟದಿಂದ) ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ಸರ್ಕಾರಿ ಹಾಗೂ ಕೊರೊನಾಗೆ ಚಿಕಿತ್ಸೆ ನೀಡುತ್ತಿರುವ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಬೆಡ್‌ಗಳ ಕುರಿತು ಪ್ರತಿನಿತ್ಯ ಬೆಳಿಗ್ಗೆ ಜಿಲ್ಲಾಡಳಿತ ಬುಲೆಟಿನ್ ಪ್ರಕಟಿಸಬೇಕು. ಈ ಬಗ್ಗೆ ಶುಕ್ರವಾರದಿಂದಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶ ಹೊರಡಿಸುವುದಾಗಿ ಸಚಿವರು ಹೇಳಿದರು. ನಾಳೆ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ವಸ್ತುಸ್ಥಿತಿ ಪರಿಶೀಲಿಸಲಾಗುವುದು. ಲೋಪದೋಷಗಳಾಗಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭೈರತಿ ಹೇಳಿದರು.

## 1,200 ಮೆಟ್ರಿಕ್ ಟನ್ ಆಕ್ಸಿಜನ್ ಸೂಕ್ತ

(1ನೇ ಪುಟದಿಂದ) ಬೇಕಿದೆ ಎಂದು ರಾಜ್ಯ ಸರ್ಕಾರವೇ ತಿಳಿಸಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಚಾಮರಾಜನಗರ ಹಾಗೂ ಕಲಬುರಗಿ ಸೇರಿದಂತೆ ಹಲವೆಡೆ ಆಕ್ಸಿಜನ್ ಕೊರತೆ ಯಿಂದ ಸಾವುಗಳು ಸಂಭವಿಸಿರುವುದನ್ನು ಪರಿಗಣಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ. ನ್ಯಾಯಮೂರ್ತಿಗಳೂ ಸಹ ಮನುಷ್ಯರೇ, ಅವರು ಜನರ ಸಮಸ್ಯೆಗಳನ್ನು ಗಮನಿಸಿದ್ದಾರೆ. ಹೈಕೋರ್ಟ್‌ಗಳು ಕಣ್ಣು ಮುಚ್ಚಿ ಕೂರಲಾಗದು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

## ಸಿ.ಟಿ. ಸ್ಕ್ಯಾನ್‌ಗೆ 1,500 ರೂ. ನಿಗದಿ

(1ನೇ ಪುಟದಿಂದ) ಎಚ್ಚರಿಕೆ ನೀಡಿದ್ದಾರೆ. ಸರಕಾರಿ ವ್ಯವಸ್ಥೆ ಅಡಿ ಸ್ಕ್ಯಾನಿಂಗ್ ಅನ್ನು ಉಚಿತವಾಗಿ ಮಾಡಲಾಗುತ್ತಿದೆ. ಸಾರ್ವಜನಿಕರು ಸರಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದೂ ಸಚಿವ ಸುಧಾಕರ್ ಮನವಿ ಮಾಡಿದ್ದಾರೆ.

# ಲಸಿಕೆಗಾಗಿ ಸಿಎಂ ಮನೆ ಮುಂದೆ ಕೂರೋಣ

(1ನೇ ಪುಟದಿಂದ) ಸಂಸದರು ಸಭೆಯಲ್ಲಿ ಆಗ್ರಹಿಸಿದರು.

ಇದಕ್ಕೂ ಮುಂಚೆ ಮಾತನಾಡಿದ ಸಚಿವ ಭೈರತಿ ಬಸವರಾಜ, ಪ್ರತಿದಿನ 15-20 ಸಾವಿರ ಲಸಿಕೆ ತರಿಸುವ ಪ್ರಯತ್ನದಲ್ಲಿದ್ದೇವೆ. ಮುಂದಿನ ವಾರ ಲಸಿಕೆಗಳು ಬರಲಿವೆ ಎಂದು ಹೇಳಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲೆಗೆ ಕೊವ್ಯಾಕ್ಸಿನ್ ಲಸಿಕೆ ಪೂರೈಕೆಯಾಗದಿರುವುದೇ ಅತಿ ಹೆಚ್ಚಿನ ಸಮಸ್ಯೆಯಾಗಿದೆ. 4,500ರಷ್ಟು ಜನರಿಗೆ ಕೊವ್ಯಾಕ್ಸಿನ್ ಲಸಿಕೆ ನೀಡಲಾಗಿದ್ದು, ಎರಡನೇ ಕಂತಿನ ಲಸಿಕೆ ಕೊಡಬೇಕಿದೆ ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಜಿಲ್ಲಾ ಕೊರೊನಾ ಲಸಿಕೆ ನೋಡಲ್ ಅಧಿಕಾರಿ ಡಾ. ಕೆ.ಎಸ್. ಮೀನಾಕ್ಷಿ, 30 ಸಾವಿರ ಜನರು ಕೋವಿಶೀಲ್ಡ್ ಪಡೆದು ಆರು ವಾರಗಳಾಗಿವೆ. ಕೋವ್ಯಾಕ್ಸಿನ್ ಪಡೆದ 850 ಜನ ಆರನೇ ವಾರದಲ್ಲಿದ್ದಾರೆ. ಇವರಿಗೆ ತಕ್ಷಣವೇ ಎರಡನೇ ಡೋಸ್ ಲಸಿಕೆ ಬೇಕಿದೆ ಎಂದು ಹೇಳಿದರು.

**ಸಹಾಯ ಮಾಡದ ವಾಣಿ :** ಜಿಲ್ಲಾಡಳಿತ ಸ್ಥಾಪಿಸಿರುವ ಸಹಾಯವಾಣಿಗೆ ಕರೆ ಮಾಡಿದರೆ ಅಲ್ಲಿ ಯಾರೂ ಕರೆ ಸ್ವೀಕರಿಸುತ್ತಿಲ್ಲ ಎಂದು ವ್ಯಕ್ತಿಯೊಬ್ಬರು ತಮಗೆ ಕರೆ ಮಾಡಿದ್ದರು ಎಂದು ಭೈರತಿ ತಿಳಿಸಿ, ಈ ರೀತಿ ಆಗದಂತೆ ಎಚ್ಚರಿಕೆ ವಹಿಸುವಂತೆ ತಿಳಿಸಿದರು.

**ಕೋವಿಡ್ ಕೇರ್‌ಗೆ ಜನ :** ಕಳೆದ ಅಲೆಯಲ್ಲಿ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಜನರನ್ನು ಇರಿಸುವ ಮೂಲಕ ಕೊರೊನಾ ನಿಯಂತ್ರಿಸಲಾಗಿತ್ತು. ಮನೆಯಲ್ಲಿ ಒಂದೇ ಶೌಚಾಲಯ ಇದ್ದರೆ ಕೊರೊನಾ ಬೇಗ ಹರಡುತ್ತದೆ. ಇದು ಉಳಿದವರಿಗೂ ಅಪಾಯ ಎಂದಿರುವ ಸಚಿವ ಭೈರತಿ, ಇಂತಹ ಮನೆಗಳಲ್ಲಿರುವ ಜನರನ್ನು ಕೋವಿಡ್ ಕೇರ್ ಕೇಂದ್ರಗಳಿಗೆ ತರಬೇಕೆಂದು ಸೂಚನೆ ನೀಡಿದರು.

**ಸಿಬ್ಬಂದಿ ನೇಮಕ :** ನಗರದ ಸಿ.ಜಿ. ಆಸ್ಪತ್ರೆ ಸೇರಿದಂತೆ, ಜಿಲ್ಲೆಯ ಹಲವಾರು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಇದನ್ನು ನೀಗಿಸಲು ಮೇ 10ರಂದು ವೈದ್ಯರು, ನರ್ಸ್ ಮತ್ತಿತರೆ ಸಿಬ್ಬಂದಿ ಯನ್ನು ನೇರ ನೇಮಕಾತಿ ಮಾತನಾಡಿಕೊಳ್ಳ ಲಾಗುವುದು ಎಂದು ಜಿಲ್ಲಾ ವೈದ್ಯಾಧಿಕಾರಿ ಡಾ. ನಾಗರಾಜ್ ಸಭೆಗೆ ತಿಳಿಸಿದರು.

ಸಭೆಯಲ್ಲಿ ಶಾಸಕ ಹಾಗೂ ಲಿಡ್ಕರ್ ಅಧ್ಯಕ್ಷ ಪ್ರೊ. ಲಿಂಗಣ್ಣ, ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿ.ಪಂ. ಸಿಇಒ ವಿಜಯ ಮಹಾಂತೇಶ್ ದಾನಮ್ಮನವರ್, ಎಸ್ಪಿ ಹನುಮಂತರಾಯ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

## ಕೋರ್ಟ್‌ಗಳು ಬಂದ್, ಜೈಲಲ್ಲೂ ಜಾಗವಿಲ್ಲ

(1ನೇ ಪುಟದಿಂದ) ಬೇಕಾಗುತ್ತಾರೆ. ಸರಕು ಸಾಗಣೆ ಮಾಡಬೇಕಾದರೆ ಗ್ಯಾರೇಜ್‌ಗಳು ಬೇಕು, ಕಟ್ಟಡ ನಿರ್ಮಾಣಕ್ಕೆ ಹತ್ತು ಹಲವು ಅಂಗಡಿಗಳನ್ನು ತೆರೆಯಬೇಕು ಎಂದವರು ತಿಳಿಸಿದರು.

ಜಿಲ್ಲೆಯಲ್ಲಿ 9 ಸಾವಿರಕ್ಕೂ ಹೆಚ್ಚು ಕೊರೊನಾ ನಿರ್ಬಂಧ ಉಲ್ಲಂಘನೆಯ ಪ್ರಕರಣಗಳನ್ನು ಹಾಗೂ 107 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದೇವೆ. ಆದರೆ, ವಿಚಾರಣೆಗೆ ನ್ಯಾಯಾಲಯಗಳು ಬಂದ್ ಆಗಿವೆ. ಜೈಲಿನಲ್ಲಿ ಜಾಗವಿಲ್ಲ ಎಂದು ವಸ್ತುಸ್ಥಿತಿ ವಿವರಿಸಿದರು.

## ಆಕ್ಸಿಜನ್ ಟ್ಯಾಂಕ್ ಖರೀದಿಗೆ ಸೂಚನೆ

(1ನೇ ಪುಟದಿಂದ) ಇದಕ್ಕೆ ಅವರಿಗೆ ಪೂರ್ಣ ಅಧಿಕಾರವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸೂಚನೆ ನೀಡಿದ್ದಾರೆ. ಜಿಲ್ಲೆಯಲ್ಲಿ ಆಕ್ಸಿಜನ್ ಸಮರ್ಪಕ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳ ಬೇಕಿದ್ದು, ಇದರಲ್ಲಿ ಹೆಚ್ಚೂ ಕಡಿಮೆಯಾದರೆ ಅವರೇ ಹೊಣೆಯಾಗುತ್ತಾರೆ ಎಂದೂ ಭೈರತಿ ಎಚ್ಚರಿಸಿದರು.

## ಅರ್ಧ ಗ್ರಾಮ ಅಸ್ವಸ್ಥ

(1ನೇ ಪುಟದಿಂದ) ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು. ತಕ್ಷಣವೇ ಗ್ರಾಮವನ್ನು ಸ್ಯಾನಿಟೈಜ್ ಮಾಡಬೇಕು ಹಾಗೂ ಗ್ರಾಮಸ್ಥರನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಬೇಕು ಎಂದು ಜಿಲ್ಲಾ ಉಸ್ತು ವಾರಿ ಸಚಿವ ಭೈರತಿ ಬಸವರಾಜ ತಿಳಿಸಿದರು.

# ಕಸಾಪ ಚುನಾವಣೆ ಮುಂದೂಡಿಕೆ ಸರ್ಕಾರದ ನಿರ್ಧಾರ ಸ್ವಾಗತಾರ್ಹ



ದಾವಣಗೆರೆ, ಮೇ 7- ಕೋವಿಡ್-19ರ ಎರಡನೇ ಅಲೆಯು ತೀವ್ರವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ನಾಡಿದ್ದು ದಿನಾಂಕ 9ರಂದು ನಡೆಯಬೇಕಿದ್ದ ಕಸಾಪ ಚುನಾವಣೆಯನ್ನು ರಾಜ್ಯ ಸರ್ಕಾರ ಮುಂದೂಡಿ ಆದೇಶಿಸಿರುವುದು ಸ್ವಾಗತಾರ್ಹ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ಕೋವಿಡ್ ಸೋಂಕು ಹೆಚ್ಚುತ್ತಿರುವುದನ್ನು ತಡೆಗಟ್ಟುವುದು ಎಷ್ಟು ಮುಖ್ಯವೋ, ಮಹಾಮಾರಿಯಿಂದ ಯಾರೊಬ್ಬರ ಪ್ರಾಣಹಾನಿಯಾಗದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ. ಮತದಾರ ಕನ್ನಡ ಬಂಧುಗಳಿಗೆ ಈ ಸೋಂಕಿನಿಂದ ಯಾವುದೇ ಜೀವ ಹಾನಿ ಅಥವಾ ಯಾರೂ ಸೋಂಕಿಗೆ ಸಿಲುಕಿಕೊಳ್ಳಬಾರದೆಂಬುದು ನಮ್ಮ ಉದ್ದೇಶವಾಗಿದೆ. ನಾವೆಲ್ಲರೂ ಕೊರೊನಾ ವಾರಿಯರ್ಸ್‌ಗಳಾಗಿ ಅದರ ನಿಯಂತ್ರಣಕ್ಕೆ ಶ್ರಮಿಸೋಣ. ಅದೇ ನಾವು ತೋರುವ ಕನ್ನಡ ಪ್ರೇಮ, ದೇಶಪ್ರೇಮವೆಂದು ಕರೆ ಕೊಟ್ಟರು. ಈ ಚುನಾವಣೆಯಲ್ಲಿ ತಮ್ಮ ಗೆಲುವಿಗಾಗಿ ಶ್ರಮಿಸುತ್ತಿದ್ದ ಹಾಗೂ ಮತದಾನ ಮಾಡಲು ಕಾತರರಾಗಿದ್ದ ಅಪಾರ ಸಂಖ್ಯೆಯ ಕನ್ನಡ ಮನಸ್ಸುಗಳಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ ಎಂದು ವಾಮದೇವಪ್ಪ ತಿಳಿಸಿದರು.



## ಆರ್. ಶಂಕರ್ ಗೆ ಯಾದಗಿರಿ ಉಸ್ತುವಾರಿ

ಬೆಂಗಳೂರು,ಮೇ 7- ತೋಟಗಾರಿಕೆ ಸಚಿವ ಆರ್.ಶಂಕರ್ ಅವರಿಗೆ ಯಾದಗಿರಿ ಜಿಲ್ಲಾ ಉಸ್ತುವಾರಿ ನೀಡಿ ಆದೇಶಿಸಲಾಗಿದೆ.

## ಹೊನ್ನಾಳಿ : ಈಶ್ವರೀಯ ವಿವಿಯಿಂದ ಆನ್‌ಲೈನ್ ರಾಜಯೋಗ ತರಗತಿ

ಹೊನ್ನಾಳಿ, ಮೇ 7- ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹೊನ್ನಾಳಿ ಶಾಖೆಯಿಂದ ಪ್ರತಿನಿತ್ಯ ಆನ್‌ಲೈನ್‌ನಲ್ಲಿ ಟೆಲಿಗ್ರಾಂ ಮೂಲಕ ಜ್ಞಾನಾಮೃತಧಾರೆ ಎಂಬ ಗ್ರೂಪ್‌ನಲ್ಲಿ ದಿನದ ಮೂರು ಬೇರೆ ಬೇರೆ ಸಮಯದಲ್ಲಿ ರಾಜಯೋಗ (ಧ್ಯಾನ) ಹಾಗೂ ಅಧ್ಯಾತ್ಮಿಕ ಮೌಲ್ಯ ತರಗತಿಗಳನ್ನು ನಡೆಸಲಾಗುತ್ತಿದೆ.

ಕೊರೊನಾ ಎಂಬ ಸೂಕ್ಷ್ಮಾಣು ಸಾಕಷ್ಟು ಹಾನಿಯುಂಟು ಮಾಡುತ್ತಿದ್ದು. ಇದನ್ನು ಗಮನಿಸಿ, ಈ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲು ಬೆಳಿಗ್ಗೆ 4 ರಿಂದ 5 ಗಂಟೆಯವರೆಗೆ ಬ್ರಾಹ್ಮೀ ಮುಹೂರ್ತದಲ್ಲಿ (ಅಮೃತ ವೇಳೆ) ಧ್ಯಾನದ ಮೂಲಕ ಸ್ವಯಂನ ಮಾನಸಿಕ, ಅಧ್ಯಾತ್ಮಿಕ ಶಕ್ತಿಗಳನ್ನು ಜಾಗೃತಗೊಳಿಸುವ ಪ್ರಯತ್ನ ಮಾಡಲಾಗುತ್ತದೆ ಎಂದು ಸಂಸ್ಥೆಯ ಸಂಚಾಲಕರಾದ ಬ್ರಹ್ಮಾಕುಮಾರಿ ಜ್ಯೋತಿ ತಿಳಿಸಿದ್ದಾರೆ.

ಇದೇ ದಿನಾಂಕ 10 ರಿಂದ 16 ರವರೆಗೆ ಮಧ್ಯಾಹ್ನ 3 ರಿಂದ 4 ರವರೆಗೆ ರಾಜಯೋಗ ಶಿಬಿರ ಗ್ರೂಪ್ ಮಾಡಲಾಗಿದ್ದು, ಆಸಕ್ತರು ಅದರ ಲಿಂಕ್ https:t.me/jion chat/OLWH8FNL57RJYTII ಅಥವಾ ನಿಮ್ಮ ಮೊಬೈಲ್‌ನಲ್ಲಿ ಟೆಲಿಗ್ರಾಂ ಡೌನ್‌ಲೋಡ್ ಮಾಡಿಕೊಂಡು ಹಾಗೂ ಹೆಸರನ್ನು 9945457157ಗೆ ವಾಟ್ಸಾಪ್‌ನಲ್ಲಿ ನೋಂದಾಯಿಸಲು ಕೋರಿದ್ದಾರೆ.

## ಕೇಂದ್ರದ ಮಾಜಿ ಸಚಿವ ಅಜಿತ್ ಸಿಂಗ್ ನಿಧನಕ್ಕೆ ಪ್ರೊ. ನರಸಿಂಹಪ್ಪ ಸಂತಾಪ

ದಾವಣಗೆರೆ,ಮೇ 7- ನಿನ್ನೆ ನಿಧನರಾದ ಮಾಜಿ ಕೇಂದ್ರ ಸಚಿವ ಹಾಗೂ ಆರ್.ಎಲ್.ಡಿ. ನಾಯಕ ಅಜಿತ್ ಸಿಂಗ್ ಅವರಿಗೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಪ್ರೊ. ಸಿ. ನರಸಿಂಹಪ್ಪ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಜಿತ್ ಸಿಂಗ್ ಅವರ ವ್ಯಕ್ತಿತ್ವ ಮತ್ತು ರಾಜಕೀಯ ಕ್ಷೇತ್ರದ ಮೂಲಕ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿರುವ ನರಸಿಂಹಪ್ಪ, ಅಜಿತ್ ಸಿಂಗ್ ಕೇಂದ್ರದಲ್ಲಿ ಸಚಿವರಾಗಿದ್ದ ಸಂದರ್ಭದಲ್ಲಿ ಕರ್ನಾಟಕಕ್ಕೆ ಅತೀ ಹೆಚ್ಚು ಸಕ್ಕರೆ ಕಂಪನಿಗಳನ್ನು ಮಂಜೂರು ಮಾಡಿದ್ದರು. ಈ ಮೂಲಕ ರಾಜ್ಯದಲ್ಲಿ 63 ಸಕ್ಕರೆ ಕಾರ್ಖಾನೆಗಳಿದ್ದು, ಇದರಿಂದ ಅತೀ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಹೊಂದಿರುವ ಭಾರತದ ಮೂರನೇ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಿದ್ದಾರೆ.

ಮಾಜಿ ಪ್ರಧಾನ ಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಪುತ್ರ ಮತ್ತು ರೈತ ಮುಖಂಡರಾಗಿದ್ದ ಅಜಿತ್ ಸಿಂಗ್ ತಮ್ಮ ಆತ್ಮೀಯ ಒಡನಾಡಿಗಳಲ್ಲೊಬ್ಬರಾಗಿದ್ದರು ಎಂದು ನರಸಿಂಹಪ್ಪ ಅವರು ಅಜಿತ್ ಸಿಂಗ್ ಅವರೊಂದಿಗಿನ ಬಾಂಧವ್ಯವನ್ನು ಮೆಲುಕು ಹಾಕಿದ್ದಾರೆ.

# ಸೋಂಕಿತರನ್ನು ಕಡೆಗಣಿಸದೇ ಸೂಕ್ತ ಸಮಯಕ್ಕೆ ಚಿಕಿತ್ಸೆ ನೀಡಿ



ಜಗಳೂರು, ಮೇ 7- ಕೋವಿಡ್ ಸೋಂಕಿತರನ್ನು ಕಡೆಗಣಿಸದೇ ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡಿ ಕಡ್ಡಾಯವಾಗಿ ಲಸಿಕೆ ಹಾಕಿಸಿ, ಆಕ್ಸಿಜನ್ ಕೊರತೆಯಾಗದಂತೆ ನೋಡಿಕೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ವೈದ್ಯಾಧಿಕಾರಿಗಳು ಹಾಗೂ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಕೊರೊನಾ ಗೆಲ್ಲಬೇಕಾದರೆ ಸಾಮಾಜಿಕ ಅಂತರ, ಮಾಸ್ಕ್ ಕಡ್ಡಾಯವಾಗಿ ಹಾಕಿಕೊಳ್ಳಬೇಕು. ಅನವಶ್ಯಕವಾಗಿ ತಿರುಗಾಡದೇ ಮನೆಯಲ್ಲೇ ಇರಬೇಕು. ಸರಕಾರದ ನಿಯಮಗಳನ್ನು ಪಾಲಿಸಬೇಕು. ಜನರು ಜಾಗ್ರತೆ ವಹಿಸಬೇಕು, ಭಯಪಡಬಾರದು ಎಂದು ಸಚಿವರು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕಳೆದ ವರ್ಷ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತ್ಯೇಕ ಕೋವಿಡ್ ಐಸೋಲೇಷನ್ ತೆರೆಯಲಾಗಿತ್ತು. ಅದಕ್ಕೂ ಮುನ್ನ ಸೋಂಕಿತರು, ಸಾಮಾನ್ಯ ರೋಗಿಗಳು ಒಂದೇ ಬಾಗಿಲಿನಿಂದ ಓಡಾಡಬೇಕಾಗಿತ್ತು. ಇದರಿಂದ ಸಾಕಷ್ಟು ಸೋಂಕಿತ ಪ್ರಕರಣಗಳು ಬೆಳಕಿಗೆ ಬಂದಿದ್ದರಿಂದ ಹೊರ ಭಾಗದಿಂದಲೇ ಐಸೋಲೇಷನ್‌ಗೆ ಹೋಗಲು ಪ್ರತ್ಯೇಕ ಬಾಗಿಲು ಮಾಡಲಾಯಿತು ಎಂದು ಸಚಿವರ ಗಮನಕ್ಕೆ ತಂದರು.

**ಕೋವಿಡ್ ಕೇಂದ್ರಕ್ಕೆ ಸಚಿವ, ಸಂಸದರ ಭೇಟಿ:** ಇದಕ್ಕೂ ಮುನ್ನ ತಾಲ್ಲೂಕಿನ ಮೆದಗಿನಕೆರೆ ಗ್ರಾಮ ಸಮೀಪದ ಮೊರಾರ್ಜಿ ವಸತಿ ಶಾಲೆಯಲ್ಲಿರುವ ಕೋವಿಡ್ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸಂಸದ ಜಿ.ಎಂ. ಸಿದ್ದೇಶ್ವರ್ ಅವರು ಕೋವಿಡ್ ಸೋಂಕಿತ ವ್ಯಕ್ತಿಗಳ ಯೋಗ ಕ್ಷೇಮ ವಿಚಾರಿಸಿದರು.

ನಾನು ಯಾರು ಗೊತ್ತಾ... ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜು, ಇವರು ಯಾರು ಗೊತ್ತಾ... ದಾವಣಗೆರೆ ಜಿಲ್ಲೆಯ ಸಂಸದ ಜಿ.ಎಂ.ಸಿದ್ದೇಶ್ವರ, ಇವರು ದಾವಣಗೆರೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಎಂದು ಸೋಂಕಿತ ಕೋವಿಡ್ ವ್ಯಕ್ತಿಗಳೊಂದಿಗೆ ಸಚಿವರು ಪರಿಚಯ ಹೇಳಿಕೊಂಡು, ಏನಾದರು ತೊಂದರೆಯಾದರೆ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ, ಅಗತ್ಯ ಸೌಲಭ್ಯಗಳನ್ನು ನೀಡುತ್ತಾರೆ. ಧೈರ್ಯವಾಗಿ ಇದ್ದು ಕೊರೊನಾದಿಂದ ಗುಣಮುಖರಾಗಬೇಕು. ಸರ್ಕಾರ ಸದಾ ಜನರ ಹಿತವನ್ನೇ ಕಾಪಾಡುತ್ತದೆ ಎಂದು ಸಚಿವರು ಧೈರ್ಯ ತುಂಬಿದರು.

**ಸರಿಯಾದ ಮಾಹಿತಿ ನೀಡದ ವೈದ್ಯಾಧಿಕಾರಿಗೆ ತರಾಟೆ:** ತಾಲ್ಲೂಕಿನಲ್ಲಿ ಎಷ್ಟು ಜನ ಕೋವಿಡ್‌ಗೆ ಒಳಗಾಗಿದ್ದಾರೆ, ಮರಣದ ಸಂಖ್ಯೆಯ ಮಾಹಿತಿ ಸ್ಪಷ್ಟವಾಗಿ ತಿಳಿಸಬೇಕು. ಎಂದು ಸಚಿವರು ಕೇಳಿದ ಪ್ರಶ್ನೆಗೆ ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗರಾಜ್ ಒಂದು ಸಾವು ಎಂದರು. ಇದರಿಂದ ಸಿಡಿಮಿಡಿಗೊಂಡ ಸಚಿವರು ಕೋವಿಡ್ ಪ್ರಮಾಣ ಜಾಸ್ತಿಯಾಗುವ ಮೂಲಕ ಜಗಳೂರು ಪಟ್ಟಣದಲ್ಲಿ ಸಾವಿನ ಸಂಖ್ಯೆ ಏರುತ್ತಿದ್ದು, 4 ಕ್ಕೂ ಅಧಿಕ ಜನರು ಕೋವಿಡ್‌ನಿಂದ ಮರಣ ಹೊಂದಿದ್ದಾರೆ. ತಡೆಗಟ್ಟುವ ನಿಟ್ಟಿನಲ್ಲಿ ಕೆಲಸ ಆಗುತ್ತಿಲ್ಲ ಎಂದು ಪತ್ರಕರ್ತರು ನನ್ನನ್ನು ಪ್ರಶ್ನೆ ಮಾಡಿದ್ದಾರೆ. ಯಾವುದು ಸರಿ? ಸರಿಯಾದ ಅಂಕಿ - ಅಂಶ ನೀಡಿ ಎಂದು ತರಾಟೆಗೆ ತೆಗೆದುಕೊಂಡರು. ಗಲಿಬಿಲಿಗೊಂಡ ವೈದ್ಯಾಧಿಕಾರಿಗಳು 4 ಸಾವಾಗಿದ್ದು, ಒಂದು ಸರ್ಕಾರದಿಂದ ವರದಿ ಬಂದಿದೆ. ಇನ್ನು ಮೂರು ವರದಿಗಳು ಬರಬೇಕಿದೆ ಎಂದರು.

## ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ ಕೋವಿಡ್ ಸೋಂಕಿತ ವ್ಯಕ್ತಿಗಳು ಎದೆ ಗುಂದಬಾರದು. ಹೊರಗಡೆ ಎಲ್ಲೂ ಓಡಾಡಬಾರದು. ಸಾಮಾಜಿಕ ಅಂತರ, ಮಾಸ್ಕ್ ಧರಿಸಬೇಕು. ಸರ್ಕಾರದಿಂದ ಸಿಗಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕೋವಿಡ್ ಸೋಂಕಿತರೊಂದಿಗೆ ಕುಶಲೋಪರಿ ವಿಚಾರಿಸಿ ಮಾತನಾಡಿ, ವಿಟಮಿನ್ ಸಿ. ಟ್ಯಾಬ್ಲೆಟ್ಸ್ ಸೇರಿದಂತೆ ಸಂಬಂಧಿಸಿದ ಮಾತ್ರೆಗಳು ನೀಡುತ್ತಾರೆಯೇ? ಎಂದು ಕೇಳಿದರಲ್ಲದೇ ಊಟದ ವ್ಯವಸ್ಥೆ ಹೇಗಿದೆ ಎಂಬ ಮಾಹಿತಿ ಪಡೆದುಕೊಂಡರು. ಗುಣಮುಖರಾದ ಮೇಲೆ ನೀವು ಸಾಧ್ಯವಾದಷ್ಟು ಮನೆಯಲ್ಲೇ ಇದ್ದು ಸುರಕ್ಷಿತವಾಗಿ ಇರುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿ.ಪಂ. ಸಿಇಓ ವಿಜಯ ಮಹಾಂತೇಶ್ ದಾನಮ್ಮನವರ, ತಹಸೀಲ್ದಾರ್ ಡಾ. ನಾಗವೇಣಿ, ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಮಲ್ಲನಾಯ್ಕ್, ನೋಡಲ್ ಅಧಿಕಾರಿ ಚಂದ್ರಶೇಖರ್, ಡಿಎಚ್‌ಓ ನಾಗರಾಜ್, ತಾಲ್ಲೂಕು ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಆಡಳಿತಾಧಿಕಾರಿ ಡಾ. ನೀರಜ್ ಇನ್ನಿತರರಿದ್ದರು.

# ಅಚ್ಚುಕಟ್ಟು ರಸ್ತೆಗಳ ಕಾಮಗಾರಿಗೆ ಚಾಲನೆ ನೀಡಿದ ಕಾಡಾ ಅಧ್ಯಕ್ಷರು



ದಾವಣಗೆರೆ, ಮೇ 7- ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರ ದೇಶದಲ್ಲಿ ಕಷ್ಟದಲ್ಲಿ ಇರುವ ಏಕೈಕ ವರ್ಗವಿದ್ದರೆ ಅದು ರೈತಾಪಿ ವರ್ಗ ಎಂದು ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಪವಿತ್ರ ರಾಮಯ್ಯ ಹೇಳಿದರು.

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ಭದ್ರಾವತಿ ವಿಧಾನಸಭಾ ಕ್ಷೇತ್ರದ ದೊಡ್ಡಗೊಪ್ಪೇನಹಳ್ಳಿ, ಹೊನ್ನೆಕಟ್ಟೆ, ಹೊಸೂರು, ಮಲ್ಲಿಗೇಹಳ್ಳಿ ಹಾಗೂ ಕಾರೇಹಳ್ಳಿ ಗ್ರಾಮದ ಅಚ್ಚುಕಟ್ಟು ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಭದ್ರಾ ಕಾಡಾ ಅಧ್ಯಕ್ಷರಾದ ನಂತರ ಅಚ್ಚುಕಟ್ಟು ಭಾಗದಲ್ಲಿ ಪ್ರವಾಸ ಕೈಗೊಂಡು ರೈತರ ಸಮಸ್ಯೆಗಳನ್ನು ಆಲಿಸಿ, ಸ್ಥಳಗಳ ಪರಿಶೀಲನೆ ನಡೆಸಿದಾಗ ಬಹಳಷ್ಟು ರಸ್ತೆಗಳು ಹಾಳಾಗಿರುವುದು ಗಮನಕ್ಕೆ ಬಂತು. ನಾನು ಭೇಟಿ ನೀಡಿದ ಪ್ರತಿಯೊಂದು ಗ್ರಾಮಕ್ಕೆ ಅನುದಾನ ಬಂದ ನಂತರ ಒಂದೊಂದು ಕೆಲಸ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದೇನೆ ಎಂದರು.

ಅನ್ನದಾತರಿಗೆ ಪ್ರಮುಖವಾಗಿ ತಾವು ಬೆಳೆದ ಬೆಳೆಗಳು, ವಸ್ತುಗಳನ್ನು ಸಾಗಿಸಲು ಹಾಗೂ ಕಟಾವು ಮಾಡಿದ ಬೆಳೆಗಳನ್ನು ಕೊಂಡೊಯ್ಯಲು ಟ್ರ್ಯಾಕ್ಟರ್, ಎತ್ತಿನಗಾಡಿ ಇನ್ನಿತರೆ ವಾಹನಗಳ ಮೂಲಕ ಪ್ರತಿದಿನ ರಸ್ತೆಗಳನ್ನು ಬಳಸುತ್ತಾರೆ. ಜೊತೆಗೆ ಕೆಲವು ರೈತರ ಬಳಿ ವಾಹನ ವ್ಯವಸ್ಥೆ ಇಲ್ಲದೇ ಇರುವುದರಿಂದ ಭತ್ತದ ಕಣಜ, ಕಬ್ಬಿನ ಜಲ್ಲೆ, ಹುಲ್ಲಿನ ಹೊರೆ ಹೊತ್ತುಕೊಂಡು ಸಾಗಲು ಉಬ್ಬು ತಗ್ಗು ಇರುವ ರಸ್ತೆಯನ್ನು ಅವಲಂಬಿಸಬೇಕಾಗಿದ್ದು ತೊಂದರೆಯಾಗಿದೆ.

ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಿ ತಕ್ಷಣವೇ ಸರ್ಕಾರಕ್ಕೆ ಅನುದಾನ ಕೋರಿ ಪತ್ರ ಬರೆದಾಗ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಂಸದರು ಸ್ಪಂದಿಸಿ ಅನುದಾನ ಬಿಡುಗಡೆಗೊಳಿಸಿದ ಪರಿಣಾಮ ಆದ್ಯತೆ ಮೇರೆಗೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಅನುಕೂಲವಾಯಿತು ಎಂದರು.

ರೈತರು ಮಾತನಾಡಿ, ಕಳೆದ 20 ವರ್ಷಗಳಿಂದ ಕೊನೆಯ ಭಾಗಕ್ಕೆ ನೀರು ತಲುಪಿರಲಿಲ್ಲ. ಈಗ ತಲುಪಿದ್ದು ಅನ್ನದಾತರ ಬಾಳಲ್ಲಿ ಹರ್ಷ ಮೂಡಿಸಿದೆ ಎಂದರು.

ಈ ಸಂದರ್ಭದಲ್ಲಿ ಅಭಿಯಂತರರಾದ ಪುನೀತ್ ಮತ್ತು ಕಿರಣ್, ಗಂಗಣ್ಣ, ಶ್ರೀನಿವಾಸ್, ಅಮುದಾ, ಅಚ್ಚುಕಟ್ಟು ಭಾಗದ ರೈತರು, ನೀರು ಬಳಕೆದಾರರ ಸಂಘದ ಪದಾಧಿಕಾರಿಗಳು, ಗ್ರಾಮದ ರೈತರು ಉಪಸ್ಥಿತರಿದ್ದರು.

# ಕೊರೊನಾ ಸೋಂಕಿತರಿಗೆ ಅವಶ್ಯ ಸೌಲಭ್ಯ ಕಲ್ಪಿಸಲು ಉಸ್ತುವಾರಿ ಸಚಿವರಿಗೆ ಮನವಿ



ದಾವಣಗೆರೆ, ಮೇ 7- ಜಿಲ್ಲೆಯಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ಸುತ್ತಮುತ್ತಲಿನ ಜಿಲ್ಲೆಗಳ ರೋಗಿಗಳು ಕೂಡ ಜಿಲ್ಲಾಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಆದ ಕಾರಣ ತುರ್ತಾಗಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಂತೆ ಶಾಸಕ ಎಸ್.ಎ.ರವೀಂದ್ರನಾಥ್, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರಲ್ಲಿ ಮನವಿ ಮಾಡಿದ್ದಾರೆ.

ಜಿಲ್ಲೆಯಲ್ಲಿ 4.34 ಲಕ್ಷ ಲಸಿಕೆ ಗುರಿ ಇದೆ. ಆದರೆ, 2.10 ಲಕ್ಷ ಲಸಿಕೆ ಮಾತ್ರ ಸರಬರಾಜಾಗಿದೆ. ಲಸಿಕೆ ಪಡೆಯಲು ಪರದಾಟ ಆರಂಭವಾಗಲಿದೆ. ಕೋವ್ಯಾಕ್ಸಿನ್ ಲಸಿಕೆ ಸರಬರಾಜಿಗೆ 2ನೇ ಡೋಸ್ ಪಡೆಯುವವರಿಗೆ ಅನಾನುಕೂಲವಾಗಿದೆ. ಕೂಡಲೇ ಇದನ್ನು ಸರಿ ಪಡಿಸುವಂತೆ ಕೋರಿದ್ದಾರೆ.

ರೆಮ್‌ಡಿಸಿವಿರ್ ಇಂಜೆಕ್ಷನ್ ಅವಶ್ಯಕತೆ ಇದೆ. ಆಕ್ಸಿಜನ್ ಮತ್ತು ವೆಂಟಿಲೇಟರ್ ಬೆಡ್‌ಗಳ ಕೊರತೆಯಿಂದ ಸಾವು - ನೋವು ಹೆಚ್ಚಾಗುತ್ತಿದೆ. ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಬೆಡ್‌ಗಳು ಖಾಲಿ ಇರುವುದಿಲ್ಲ. ಹೆಚ್ಚಿನ ಹಾಸಿಗೆಗಳ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ ಎಂದು ಮನವಿ ಮಾಡಿದ್ದಾರೆ.

ದಾವಣಗೆರೆಯಲ್ಲಿ ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅವಶ್ಯಕತೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳುಳ್ಳ ಕೋವಿಡ್ ಕೇರ್ ಸೆಂಟರ್ ಪ್ರಾರಂಭಿಸಬೇಕಾಗಿದೆ. ನಾನ್ ಕೊರೊನಾ ರೋಗಿಗಳಿಗೆ ತುರ್ತಾಗಿ ಅವಶ್ಯಕ ವೈದ್ಯಕೀಯ ಚಿಕಿತ್ಸೆಗೆ ಕ್ರಮ ವಹಿಸಬೇಕೆಂದು ಕೋರಿದ್ದಾರೆ.

# ರೈಲು ಸಂಚಾರ ವಿಸ್ತರಣೆ

ದಾವಣಗೆರೆ, ಮೇ 7 - ನೈರುತ್ಯ ರೈಲ್ವೆ ವಿಭಾಗವು ಹೌರಾ-ಮೈಸೂರು (08117) ಬೇಸಿಗೆ ವಿಶೇಷ ಸೂಪರ್‌ಫಾಸ್ಟ್ ವೀಕ್ಲಿ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಇಂದಿನಿಂದ ಜೂನ್ 25 ರವರೆಗೆ ಹಾಗೂ ಮೈಸೂರು-ಹೌರಾ (08118) ರೈಲು ಸಂಚಾರ ಸೇವೆಯನ್ನು ನಾಡಿದ್ದು ದಿನಾಂಕ 9 ರಿಂದ ಜೂನ್ 27 ರವರೆಗೆ ವಿಸ್ತರಿಸಿದೆ.

ಯಶವಂತಪುರ-ಹೌರಾ (06597) ಬೇಸಿಗೆ ವಿಶೇಷ ಸೂಪರ್‌ಫಾಸ್ಟ್ ವೀಕ್ಲಿ ರೈಲು ಸಂಚಾರವನ್ನು ಮೇ 13 ರಿಂದ ಜೂ.24 ರವರೆಗೆ ಹಾಗೂ ಹೌರಾ-ಯಶವಂತಪುರ (06598) ರೈಲು ಸಂಚಾರ ಸೇವೆಯನ್ನು ಮೇ 18 ರಿಂದ ಜೂ. 29 ರವರೆಗೆ ವಿಸ್ತರಿಸಿದೆ.

**ರೈಲು ಸಂಚಾರ ರದ್ದು ಮುಂದುವರಿಕೆ :** ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್ - ಗದಗ ಎಕ್ಸ್‌ಪ್ರೆಸ್ (01139) ಜೂನ್ 30 ರವರೆಗೆ ಹಾಗೂ ಗದಗ - ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ (01140) ರೈಲು ಸಂಚಾರ ರದ್ದು ಜುಲೈ 1 ರವರೆಗೆ ಮುಂದುವರೆಸಲಾಗಿದೆ.

ಈ ಮೊದಲು ಮೇ 10 ರವರೆಗೆ ರೈಲು ಸಂಚಾರ ರದ್ದುಪಡಿಸುವ ನಿರ್ಧಾರ ಕೈಗೊಳ್ಳಲಾಗಿತ್ತು ಎಂದು ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

# ಸತತ ನಾಲ್ಕನೇ ದಿನ ಪೆಟ್ರೋಲ್ ಬೆಲೆ ಏರಿಕೆ

ನವದೆಹಲಿ, ಮೇ 7 – ಸತತ ನಾಲ್ಕನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಾಗಿದ್ದು, ರಾಜಸ್ಥಾನ ಹಾಗೂ ಮಧ್ಯ ಪ್ರದೇಶಗಳ ಕೆಲವೆಡೆ ಪೆಟ್ರೋಲ್ ಬೆಲೆ ಲೀಟರ್‌ಗೆ 102 ರೂ.ಗಳವರೆಗೆ ತಲುಪಿದೆ.

ಶುಕ್ರವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 29 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 31 ಪೈಸೆಯಷ್ಟು ಹೆಚ್ಚಿಸಲಾಗಿದೆ. ಈ ವರ್ಷ ಪೆಟ್ರೋಲ್ ಬೆಲೆ ಶತಕದ ಗಡಿ ದಾಟುತ್ತಿರುವುದು ಎರಡನೇ ಬಾರಿ. ಫೆಬ್ರವರಿ ಮಧ್ಯಾವಧಿಯಲ್ಲಿ ಮೊದಲ ಬಾರಿ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿ ನಂತರ ಇಳಿಕೆಯಾಗಿತ್ತು.

# ಕೊರೊನಾದಿಂದ ರಾಜ್ಯದಲ್ಲಿ 592 ಸಾವು

ಬೆಂಗಳೂರು, ಮೇ 7 – ರಾಜ್ಯದಲ್ಲಿ ಶುಕ್ರವಾರ ಒಂದೇ ದಿನ ಕೊರೊನಾದಿಂದ 592 ಜನ ಸಾವನ್ನಪ್ಪಿದ್ದಾರೆ. ಇದೇ ದಿನ ಒಟ್ಟು ಸೋಂಕಿತರ ಸಂಖ್ಯೆ 18 ಲಕ್ಷದ ಗಡಿ ದಾಟಿದೆ.

ಈ ಹಿಂದೆ ಮೇ 5ರಂದು ಒಂದೇ ದಿನ ಅತಿ ಹೆಚ್ಚಿನ 346 ಜನರು ಸೋಂಕಿನಿಂದ ಸಾವನ್ನಪ್ಪಿದ್ದರು. ಶುಕ್ರವಾರ 48,791 ಸೋಂಕಿತರು ಪತ್ತೆಯಾಗಿದ್ದು, ಈ ದಿನ 28,623 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಶುಕ್ರವಾರ ಬೆಂಗಳೂರು ನಗರ ಒಂದರಲ್ಲೇ 346 ಜನ ಸಾವನ್ನಪ್ಪಿದ್ದಾರೆ.

## ಆಯುಷ್ ಇಲಾಖೆಯಿಂದ ಸೋಂಕಿತರಿಗೆ ಔಷಧ ವಿತರಣೆ

ನವದೆಹಲಿ, ಮೇ 7 – ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವ ಕೊರೊನಾ ಸೋಂಕಿತರಿಗೆ ಆಯುಷ್ 64 ಎಂಬ ಆಯುರ್ವೇದ ಔಷಧ ಹಾಗೂ ಕಬಸುರ ಕುದಿನೀರ್ ಎಂಬ ಸಿದ್ಧ ಔಷಧವನ್ನು ವಿತರಿಸಲಾಗುವುದು ಎಂದು ಆಯುಷ್ ಇಲಾಖೆ ತಿಳಿಸಿದೆ. ಈ ಔಷಧಗಳ ದಕ್ಷತೆ ಬಹು ಹಂತದ ಔಷಧೀಯ ಪ್ರಯೋಗಗಳಲ್ಲಿ ಸಾಬೀತಾಗಿದೆ ಎಂದು ಆಯುಷ್ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕೊರೊನಾ ಪೀಡಿತರಿಗೆ ಉಚಿತ ಆಂಬ್ಯುಲೆನ್ಸ್ ಸೇವೆ




ದಾವಣಗೆರೆ, ಮೇ 7- ಇಲ್ಲಿನ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಆಶ್ರಯದಲ್ಲಿ ಸೇವಾ ಭಾರತಿ ಟ್ರಸ್ಟ್ ವತಿಯಿಂದ ಕೊರೊನಾ ಪೀಡಿತರಿಗೆ ಉಚಿತ ಆಂಬ್ಯುಲೆನ್ಸ್ ಸೇವೆಗೆ ನಗರದಲ್ಲಿ ಇಂದು ಚಾಲನೆ ದೊರೆಯಿತು. ಮಹಾಪೌರ ಎಸ್.ಟಿ. ವೀರೇಶ್ ಈ ಸೇವೆಗೆ ಚಾಲನೆ ನೀಡಿದರು.

ಉಚಿತ ಸೇವೆಗಾಗಿ 9844385322 ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸುವಂತೆ ಸಂಘದವರು ಕೋರಿದ್ದಾರೆ. ರಾಷ್ಟ್ರೋತ್ಥಾನ ಸಂಸ್ಥೆಯ ಕಾರ್ಯದರ್ಶಿ ಹೆಚ್. ಜಯಣ್ಣ, ಸದಸ್ಯ ವಿನಾಯಕ ರಾನಡೆ, ಸಂಘದ ವಿಭಾಗ ಸೇವಾ ಪ್ರಮುಖ ಸಿದ್ದಲಿಂಗಸ್ವಾಮಿ, ಅರುಣ ಗುಡ್ಡದ ಕೇರಿ, ಅಜಿತ್, ಸಂಪತ್ ಇದ್ದರು.

# ಆಮ್ಲಜನಕವನ್ನು ಬೇರೆ ಜಿಲ್ಲೆಗಳಿಗೆ ಕಳಿಸದೇ ನಮ್ಮ ಜಿಲ್ಲೆಯ ರೋಗಿಗಳಿಗೆ ಮೀಸಲಿಡಿ

## ಜಿಲ್ಲಾಧಿಕಾರಿಗಳಿಗೆ ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ ಒತ್ತಾಯ



ದಾವಣಗೆರೆ, ಮೇ 7- ಪ್ರಸ್ತುತ ವೈದ್ಯಕೀಯ ತುರ್ತು ಪರಿಸ್ಥಿತಿಯನ್ನು ಅವಲೋಕಿಸಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಜನರ ಜೀವನದ ಜೊತೆ ಚೆಲ್ಲಾಟ ಬೇಡ ಎಂದು ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.


ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳು ಕೋವಿಡ್ ನಿಯಂತ್ರಣದ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕೇವಲ ಪ್ರಚಾರಕ್ಕಾಗಿ ಬೇಡ. ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಕಠಿಣ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿಭಾಯಿಸಬೇಕಾಗಿದೆ ಎಂದರು.

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಮ್ಲಜನಕದ ಬೇಡಿಕೆ ಕೂಡಾ ಹೆಚ್ಚಾಗುತ್ತಿದೆ. ಇದೀಗ ಜಿಲ್ಲೆಗೆ 8,500 ಲೀ. ಆಮ್ಲಜನಕದ ಅವಶ್ಯಕತೆ ಇದೆ. ಆಮ್ಲಜನಕವನ್ನು ಬೇರೆ ಜಿಲ್ಲೆಗಳಿಗೆ ಕಳಿಸದೇ ನಮ್ಮ ಜಿಲ್ಲೆಯ ರೋಗಿಗಳಿಗೆ ಮೀಸಲಿಡುವಂತೆ ಮನವಿ ಮಾಡಿದರು.

ಹರಿಹರ ತಾಲ್ಲೂಕಿನಲ್ಲಿ ಇರುವ ಸದರನ್ ಗ್ಯಾಸ್ ಸಂಸ್ಥೆಯು ಆಮ್ಲಜನಕವನ್ನು ದಾವಣಗೆರೆ ಸಿ.ಜಿ. ಆಸ್ಪತ್ರೆಗೆ 6 ಕೆ.ಎಲ್, ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ 4 ಕೆ.ಎಲ್ ಸರಬರಾಜು ಮಾಡುತ್ತಿದ್ದು, ಇದರೊಟ್ಟಿಗೆ ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ, ಹಾವೇರಿ ಜಿಲ್ಲೆಯ ರಾಣೇಬೆನ್ನೂರು, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಹೂವಿನಹಡಗಲಿ ತಾಲ್ಲೂಕುಗಳಿಗೂ 8,500 ಲೀಟರ್ ಆಕ್ಸಿಜನ್ ಸರಬರಾಜು ಮಾಡಲಾಗುತ್ತಿತ್ತು ಎಂದು ಮಾಹಿತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಕಡತಿ ತಿಪ್ಪಣ್ಣ, ಬಿ.ಜಿ. ಚಂದ್ರಶೇಖರ್, ಯಲವಟ್ಟಿ ಕೃಷ್ಣಮೂರ್ತಿ, ಟಿ ನಾಗರಾಜ್ ಮತ್ತಿತರರಿದ್ದರು.

# ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಸರಳವಾಗಿ ಬಸವ ಜಯಂತಿ



ದಾವಣಗೆರೆ,ಮೇ 7-ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 14ರ ಶುಕ್ರವಾರ ಶ್ರೀ ಬಸವ ಜಯಂತಿಯನ್ನು ಸರಳವಾಗಿ ಆಚರಿಸಲಾಗುವುದು ಎಂದು ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರೂ ಆದ ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ ತಿಳಿಸಿದ್ದಾರೆ.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಆಗಿರುವ ಲಾಕ್‌ಡೌನ್ ಪರಿಣಾಮ ಬಸವ ಜಯಂತಿಯನ್ನು ಸರಳವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದ್ದಾರೆ.

# 2ನೇ ಅಲೆ : ಮಕ್ಕಳಿಗಾಗಿ 14499 ಟೆಲಿ ಕೌನ್ಸೆಲಿಂಗ್

ಬೆಂಗಳೂರು, ಮೇ 7 - ರಾಜ್ಯದಲ್ಲಿ ಕೊರೊನಾದ ಎರಡನೇ ಅಲೆಯ ಹಿನ್ನೆಲೆಯಲ್ಲಿ ಆಪ್ತ ಸಮಾಲೋಚನೆಗಾಗಿ ಅಗತ್ಯವಿರುವ ಎಲ್ಲಾ ಮಕ್ಕಳಿಗಾಗಿ ಉಚಿತ ಟೆಲಿ- ಕೌನ್ಸೆಲಿಂಗ್ ಸೌಲಭ್ಯವನ್ನು ನೀಡಲು ಟೋಲ್ ಫ್ರೀ ಸಂಖ್ಯೆ 14499ನ್ನು ಸ್ಥಾಪಿಸಲಾಗಿದೆ.

ಆಪ್ತ ಸಮಾಲೋಚನೆ ಬಯಸುವ ಕರ್ನಾಟಕದಲ್ಲಿನ ಎಲ್ಲಾ ಮಕ್ಕಳು ಹಾಗೂ ಮಕ್ಕಳಿಗಾಗಿ ಮಕ್ಕಳ ಪೋಷಕರು ಸಹ 14499 ಸಂಖ್ಯೆಗೆ ಕರೆ ಮಾಡುವ ಮೂಲಕ ಮಕ್ಕಳಿಗೆ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬ ಹುದಾಗಿದೆ.

ಅಲ್ಲದೇ ರಾಷ್ಟ್ರಾದ್ಯಂತ ಚಾಲ್ತಿಯಲ್ಲಿರುವ ಮಕ್ಕಳ ಸಹಾಯವಾಣಿ ಸೇವೆ: 1098 ಸಂಕಷ್ಟದಲ್ಲಿ ಸಿಲುಕಿರುವ/ ರಕ್ಷಣೆ ಮತ್ತು ಪೋಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆ ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ.

**ರಂಜಾನ್ ರೋಜಾ ಸಮಯ**

ದಿನಾಂಕ : 08.05.2021
ಇಫ್ತೇಯಾರಿ ಸಮಯ : 6-50
ದಿನಾಂಕ 09.05.2021
ಸಹೇರಿ ಸಮಯ : 4-43

# ಕೃಷಿ ಅಧಿಕಾರಿಗಳಿಂದ ರಸಗೊಬ್ಬರ ಮಾರಾಟ ಮಳಿಗೆಗಳ ಪರಿಶೀಲನೆ




ಹರಿಹರ, ಮೇ 7- ಮುಂಗಾರು ಹಂಗಾಮು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಸಕಾಲದಲ್ಲಿ ರಸಗೊಬ್ಬರ, ಬಿತ್ತನೆ ಬೀಜ ಲಭ್ಯವಾಗಲಿ ಎಂಬ ದೃಷ್ಟಿಯಿಂದ ತಾಲ್ಲೂಕಿನ ರಸಗೊಬ್ಬರ, ಬಿತ್ತನೆ ಬೀಜ ಮಾರಾಟ ಮಳಿಗೆಗಳನ್ನು ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ವಿ.ಪಿ. ಗೋವರ್ಧನ್ ಮತ್ತು ಕೃಷಿ ಅಧಿಕಾರಿಗಳಾದ ಹೆಚ್.ಆರ್. ಇನಾಯತ್, ಕೆ. ಮಲ್ಲಿಕಾರ್ಜುನ್ ಅವರುಗಳು ಪರಿಶೀಲಿಸಿದರು.

ಸಗಟು ಮಾರಾಟಗಾರರಿಗೆ ಈಗಾಗಲೇ ಯೂರಿಯಾ ಗೊಬ್ಬರ ಸರಬರಾಜಾಗಿದ್ದು, ಸರ್ಕಾರದ ನಿಯಮಾನುಸಾರ ಪಿ.ಓ.ಎಸ್. ಯಂತ್ರಗಳ ಮೂಲಕ ನಿಯಂತ್ರಿತವಾಗಿ ರೈತರಿಗೆ ನೀಡಲು ಅಂಗಡಿ ಮಾಲೀಕರಿಗೆ ಸೂಚಿಸಿದರು. ಬಿತ್ತನೆ ಬೀಜದ ಲೂಸ್ ಮಾರಾಟ ಕಂಡು ಬಂದಲ್ಲಿ ಮತ್ತು ದಾಸ್ತಾನೀಕರಿಸಿದಲ್ಲಿ ಸಂಬಂಧಿಸಿದ ಮಾರಾಟಗಾರರ ಪರವಾನಗಿ ರದ್ದುಪಡಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಲಾಯಿತು.

ರೈತರಿಗೆ ಕಡ್ಡಾಯವಾಗಿ ರಸೀದಿ ನೀಡಬೇಕು ಮತ್ತು ರೈತರ ವಿವರಗಳನ್ನು ದಾಖಲಿಸಿಕೊಳ್ಳಬೇಕೆಂದು ತಿಳಿಸಿದರು. ಒಬ್ಬನೇ ರೈತನಿಗೆ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಮಾರುವಂತಿಲ್ಲ ಹಾಗೂ ಹರಿಹರ ತಾಲ್ಲೂಕಿನ ರೈತರಿಗೆ ಮಾತ್ರ ರಸಗೊಬ್ಬರ ಮೀಸಲಿಡಲು ತಿಳಿಸಲಾಯಿತು. ರಸಗೊಬ್ಬರ ಮಾರಾಟ ಮಳಿಗೆಗಳನ್ನು ತೆರೆಯಲು ಅನುಮತಿ ಇರುವುದರಿಂದ ತಮ್ಮ ವ್ಯವಹಾರ ನಡೆಸುವಂತೆ ತಿಳಿಸಲಾಯಿತು.

# ರಫ್ತು ಮಾಡಬೇಕಿದ್ದ 50 ಲಕ್ಷ ಲಸಿಕೆ 18ರ ವಯೋಮಾನದವರಿಗೆ

ನವದೆಹಲಿ, ಮೇ 7 – ಬ್ರಿಟನ್‌ಗೆ ರಫ್ತು ಮಾಡಲು ಸೆರಮ್ ಇನ್‌ಸ್ಟಿಟ್ಯೂಟ್ ಕಾಯ್ದಿರಿಸಿದ್ದ 50 ಲಕ್ಷ ಕೊವಿಶೀಲ್ಡ್ ಲಸಿಕೆಗಳನ್ನು ಈಗ 18 ರಿಂದ 44ರ ವಯೋಮಾನದವರಿಗೆ ನೀಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕೊರೊನಾ ಸೋಂಕು ಹೆಚ್ಚಾಗಿರುವ 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಈ ಲಸಿಕೆಗಳನ್ನು ಹಂಚಲಾಗುವುದು.

# ಯಾರು ಹೊಣೆ ?

ಇಡೀ ಪ್ರಪಂಚ, ಕಣ್ಣಿಗೆ ಕಾಣದ ವೈರಸ್ ದಾಳಿಯಿಂದ ಕಂಗೆಟ್ಟು ಹೋಗಿದೆ. ಅದರಲ್ಲೂ ನಮ್ಮ ದೇಶದಲ್ಲಿ ಎರಡನೇ ಅಲೆ ಮರಣ ಮೃದಂಗವನ್ನೇ ಬಾರಿಸುತ್ತಿದೆ. ವೈರಸ್ ವಿರುದ್ಧ ಹೋರಾಡಲು ಸಾಧ್ಯವಾಗದೆ ಅದೆಷ್ಟೋ ಜನ ತಮ್ಮ ಉಸಿರು ಚೆಲ್ಲುತ್ತಿದ್ದಾರೆ. ಆದರೆ ನಾವು ಮಾತ್ರ ಸರ್ಕಾರ ಸರಿ ಇಲ್ಲ, ನಾಯಕರು ಸರಿ ಇಲ್ಲ, ವ್ಯವಸ್ಥೆ ಸರಿ ಇಲ್ಲ, ಅಧಿಕಾರಿಗಳು ಸರಿಯಿಲ್ಲ, ಎಂದು ಹಳ್ಳಿಗಳ ಕಟ್ಟೆಗಳಿಂದ ಹಿಡಿದು ದಿಲ್ಲಿಯ ಪಾರ್ಲಿಮೆಂಟಿನವರೆಗೂ ಮಾತನಾಡುತ್ತೇವೆ. ಸಾಮಾನ್ಯ ವ್ಯಕ್ತಿಯಿಂದ ಹಿಡಿದು ವಿರೋಧ ಪಕ್ಷದ ನಾಯಕರುಗಳವರೆಗೆ ಎಲ್ಲರಿಗೂ ನಮ್ಮ ವ್ಯವಸ್ಥೆಯ ವಿರುದ್ಧ ಆಕ್ರೋಶವೇ. ಆದರೆ ಇದಕ್ಕೆ ಯಾರು ಹೊಣೆ ?

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದರೆ ನಿಲ ಬಾರದು
ಏರಿ ನೀರುಂಬಡೆ ಬೇಲಿ ಕೈಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆಹಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವ!!

ಇವತ್ತಿನ ಜಗತ್ತಿನ ಪರಿಸ್ಥಿತಿ ಈ ವಚನದ ಹೊರತಾಗಿಲ್ಲ ಮನುಷ್ಯನ ಪ್ರಯತ್ನ, ಪ್ರಯೋಗ ಪ್ರಗತಿಗಳು ಏನೇ ಇದ್ದರೂ, ಪ್ರಕೃತಿಯ ಮುಂದೆ ಮತ್ತೊಮ್ಮೆ ಮಂಡಿಯೂರಿ ಮಾನವ ಕುಳಿತಿದ್ದಾನೆ. ನೀರಿನ ಮೇಲೆ ತೇಲುವ ಶವವನ್ನು ನೋಡಿದ ಮೇಲೆ ತಿಳಿಯುವ ಸತ್ಯವೊಂದೇ ಭಾರ ಇರುವುದು ಭೌತಿಕ ದೇಹಕ್ಕಲ್ಲ ಅದರಲ್ಲಿರುವ ಉಸಿರಿಗೆ ಎಂದು. ಅಂತಹ ಪ್ರಾಣವಾಯುಗೇ ಇಂದು ಬರ ಬಂದಿದೆ.

ಈಗ ವ್ಯವಸ್ಥೆಯನ್ನು ಖಂಡಿಸುತ್ತಿರುವ ನಾವು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳವರೆಗೆ ಸರ್ಕಾರಗಳನ್ನು ಕೇಳಿದ್ದು ಮಾತ್ರ ಮಠ-ಮಂದಿರ, ಚರ್ಚ್, ಮಸೀದಿಗಳಿಗೆ ದೇಣಿಗೆ, ಜಾತಿಗಳಿಗೆ ಜಾತಿವಾರು ಮೀಸಲಾತಿ, ಉಚಿತ ಸೌಲಭ್ಯಗಳು, ಒಂದೇ ಒಂದು ದಿನವಾದರೂ ನಮಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಬೇಕಾದ ಮೂಲಭೂತ ವ್ಯವಸ್ಥೆ ಬೇಕು (ಅನ್ನ, ಅಕ್ಷರ, ಆರೋಗ್ಯ) ಎಂದು ಯಾರು ಧರಣಿ ಪ್ರತಿಭಟನೆ ಮಾಡಲೇ ಇಲ್ಲ ನಮ್ಮನ್ನಾಳುವವರು ಸಹ ನಾವು ಏನು ಕೇಳುತ್ತಾ ಬಂದೆವೋ ಅವುಗಳನ್ನೇ ಕೊಟ್ಟರು.

ಸುಮಾರು 300 ವರ್ಷಗಳ ಕಾಲ ಬೇರೆಯವರಿಂದ ಆಳಿಸಿಕೊಂಡು ಈಗ ಕೇವಲ 75 ವರ್ಷಗಳಿಂದ ಸ್ವತಂತ್ರಗೊಂಡು 130 ಕೋಟಿ ಜನಸಂಖ್ಯೆ ಹೊಂದಿರುವ ದೊಡ್ಡ ರಾಷ್ಟ್ರಕ್ಕೆ(ಯುರೋಪ್ ಖಂಡದ ಎಲ್ಲಾ ರಾಷ್ಟ್ರಗಳ ಜನಸಂಖ್ಯೆ) ಅದರಲ್ಲೂ ಈಗ ತಾನೇ ಅಭಿವೃದ್ಧಿಹೊಂದುತ್ತಿರುವ ನಮ್ಮಂತಹ ರಾಷ್ಟ್ರಕ್ಕೆ ಇಂತಹ ವಿಪತ್ತುಗಳು ಬಂದಾಗ ಅದನ್ನು ಸೂಕ್ತವಾಗಿ ನಿರ್ವಹಿಸುವುದು ಕಷ್ಟಸಾಧ್ಯವೇ ಸರಿ. ಜಗತ್ತಿನ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒಳಗೊಂಡ ಇಟಲಿ, ಜರ್ಮನ್ ಅಮೆರಿಕದಂಥ ದೇಶಗಳು ಅಷ್ಟು ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದು, ಜಗತ್ತಿನ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳಿದ್ದು ಮುಂದುವರೆದ ರಾಷ್ಟ್ರಗಳಾದರೂ ಸಹ ಇಂತಹ ವಿಪತ್ತನ್ನು ನಿರ್ವಹಿಸಲು ಹೆಣಗಾಡಿದನ್ನು ನಾವು ನೋಡಿದ್ದೇವೆ.

ರೋಗ ಹರಡುವುದಕ್ಕೆ ನಾವೇ ಕಾರಣ ಎಂದು ನಮಗೆ ಗೊತ್ತಿದ್ದರೂ ನಾವು ನಮ್ಮ ದೈನಂದಿನ ಅಭ್ಯಾಸಗಳನ್ನು ಬಿಡಲು ತಯಾರಿಲ್ಲ, ಸರ್ಕಾರದ ಯಾವುದೇ ನಿಯಮಗಳನ್ನು ಪಾಲಿಸುತ್ತಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಿರಲಿ ಎಂಬ ಮನೋಭಾವವಂತೂ ಇಲ್ಲವೇ ಇಲ್ಲ, ಹಕ್ಕುಗಳಿಗೆ ಮಾತ್ರ ಬದ್ಧವಾಗಿರುವ ನಾವು ನಮ್ಮ ಕರ್ತವ್ಯಗಳನ್ನು ಮರೆತೇಬಿಟ್ಟಿದ್ದೇವೆ. ಹೀಗಿರುವಾಗ ಇದಕ್ಕೆ ಯಾರು ಹೊಣೆ? ಎಲ್ಲಿಯವರೆಗೆ ದೇಶ ಬೇರೆಯಲ್ಲ ,ನಾನು ಬೇರೆಯಲ್ಲ ಎಂಬ ಮನಸ್ಥಿತಿಗೆ ನಾವು ಬರುವುದಿಲ್ಲವೋ ಅಲ್ಲಿಯವರೆಗೆ ಹೀಗೆ ವ್ಯವಸ್ಥೆಯನ್ನು ದೂರುತ್ತಲೇ ಇರುತ್ತೇವೆ. ನಮ್ಮ ಈ ಧೋರಣೆಯನ್ನು ನೋಡಿ ಡಿ.ವಿ.ಜಿ.ಯವರು ಹೀಗೆ ಹೇಳುತ್ತಾರೆ, 'ಸರ್ಕಾರವೆಂಬುದು ನಾವಲ್ಲದೇ ಬೇರೆ ಇನ್ನಾರು ಹೊರಬೇಕಾದ ಹೊಣೆ, ಅದಕ್ಕೂ ನಮಗೂ ಸಂಬಂಧವಿಲ್ಲ. ನಮ್ಮ ಕೆಲಸವೇನಿದ್ದರೂ ಗೊಣಗಾಡುವುದು, ದಂಡ ತೆರುವುದು ಇಷ್ಟೇ ಮಿಕ್ಕಿದ್ದನ್ನು ಇನ್ನ್ಯಾರೋ ನಡೆಸಿಕೊಂಡು ಹೋಗಲಿ, ಅವರು ಚೆನ್ನಾಗಿ ನಡೆಸದಿದ್ದರೆ ಅದು ನಮ್ಮ ದುರ್ದೈವ ಹೀಗೆಂಬುದು ಅನೇಕ ಶತಮಾನಗಳಿಂದ ರೂಢಿಯಾಗಿರುವ ಮನೋವೃತ್ತಿ. ಎಂದಿನವರೆಗೆ ನಮ್ಮ ಜನರ ಮನೋವೃತ್ತಿ ಇದೇ ಆಗಿರುತ್ತದೆಯೋ ಅಂದಿನವರೆಗೆ ಸ್ವಾತಂತ್ರ್ಯದ ಕಾಯಿ ನಮ್ಮ ಬಾಯಿಗೆ ಮಾಗಿದ ಹಣ್ಣಾಗದು.'



**- ಪದ್ಮ ರವಿ, ಬೆಂಗಳೂರು.**


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07.05.2021ರಂದು ನಿಧನರಾದ
S.T.R.M.S. ಬಸ್ ಮಾಲೀಕರಾದ
**ಶ್ರೀ ಮಾರುತಿರಾವ್ ಜಾಧವ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಕಮ್ಮತ್ತಹಳ್ಳಿ ಮಂಜುನಾಥ್, ಅಧ್ಯಕ್ಷರು**
ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘ
ಹಾಗೂ ಸರ್ವ ಸದಸ್ಯರುಗಳು ಮತ್ತು
ಎಲ್ಲಾ ಖಾಸಗಿ ಬಸ್ ಮಾಲೀಕರುಗಳು,
ಜಿಲ್ಲಾ ಖಾಸಗಿ ಬಸ್ ಏಜೆಂಟರುಗಳ ಸಂಘ
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು
ಹಾಗೂ ಸರ್ವ ಸದಸ್ಯರುಗಳು ದಾವಣಗೆರೆ.


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte